|| ಶ್ರೀ ಹರಿಃ ||
ವಸುದೇವಸುತಂ(ನ್) ದೇವಂ(ಙ) ಕಂಸಚಾಣೂರಮರ್ದನಂ
|
ದೇವಕೀಪರಮಾನಂದಂ(ಙ) ಕೃಷ್ಣಂ(ಮ್) ವಂದೇ
ಜಗದ್ಗುರುಮ್ ||

|| ಶ್ರೀಮದ್ಭಗವದ್ಗೀತಾ ಅರ್ಥವಿವೇಚನೆ ಮತ್ತು ವ್ಯಾಖ್ಯಾನ ||

**ಅಧ್ಯಾಯ 14: ಗುಣತ್ರಯವಿಭಾಗಯೋಗ**

1/2 (ಶ್ಲೋಕ 1-10), ಭಾನುವಾರ, 20 ಆಗಷ್ಟ್ 2023

**ವಿವೇಚನಕಾರರು: ಗೀತಾ ವಿಶಾರದ ಶ್ರೀ ಡಾ. ಆಶು ಗೋಯಲ್ ಜಿ**

YouTube ಲಿಂಕ್: https://youtu.be/QJXYARz06oo

# ಜಗತ್ತಿನ ಸರ್ವ ಜೀವರ ಪಿತಾ ಪರಮಾತ್ಮನಾದರೆ, ಅವರೆಲ್ಲರ ಮಾತೆಯು ಮಹದ್ ಬ್ರಹ್ಮರೂಪಿ ಪ್ರಕೃತಿಯಾಗಿರುವಳು

೧೪ನೇ ಅಧ್ಯಾಯದ ಉತ್ತರಾರ್ಧ ಭಾಗದ ವಿವೇಚನ ಸತ್ರವು, ದೀಪ ಪ್ರಜ್ವಲನೆ ಮತ್ತು ಪ್ರಾರ್ಥನೆಯಿಂದ ಸದ್ಭಾವನಾಪೂರ್ಣತೆಯಿಂದ ಪ್ರಾರಂಭವಾಯಿತು. ಶ್ರೀಕೃಷ್ಣನ ಪ್ರಾರ್ಥನೆ ಮತ್ತು ಗುರುಚರಣಾರವಿಂದಗಳಿಗೆ ನಮನ ಸಲ್ಲಿಸಿ ವಿವೇಚಕರು ಇಂದಿನ ವಿವೇಚನೆಯನ್ನು ಪ್ರಾರಂಭಿಸಿದರು. ಭಗವಂತನ ಅತ್ಯಂತ ಮಂಗಳಕರ ಮತ್ತು ಕಲ್ಯಾಣಕಾರಿಯಾದ ಕೃಪಾದೃಷ್ಟಿಯು ನಮ್ಮೆಲ್ಲರ ಮೇಲಿದೆ. ನಮ್ಮೆಲ್ಲರ ಜೀವನ ಕೃತಾರ್ಥಗೊಳಿಸಲು ಮತ್ತು ಸಫಲಗೊಳಿಸಲು, ಗೀತಾಜಿಯ ಕಲಿಕೆಯನ್ನು ಅನುಸಂಧಾನ ರೂಪಿಯಾಗಿ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತ್ಯಂತ ಮುಖ್ಯವಾಗಿದೆ. ಇಂದಿನ ಸತ್ರದಲ್ಲಿ ನಾವೆಲ್ಲರೂ ೧೪ನೇ ಅಧ್ಯಾಯದ ಚಿಂತನೆಯನ್ನು ಮಾಡೋಣ. ಈ ಅಧ್ಯಾಯದಲ್ಲಿ ಗುಣಾತೀತ ಮತ್ತು ತ್ರಿಗುಣಾತೀತವಾದ ಜ್ಞಾನವನ್ನು ಶ್ರೀಕೃಷ್ಣನು ವರ್ಣನೆ ಮಾಡುತ್ತಾನೆ. ಗುಣಾತೀತ ಲಕ್ಷಣದ ಸೂಚಿಯನ್ನು ಕೊಟ್ಟು ತತ್ತ್ವಜ್ಞಾನದ ಗೂಢಾರ್ಥವನ್ನು ತಿಳಿಸುತ್ತಾನೆ. ಜ್ಞಾನ ಯೋಗದ ಮೌಲಿಕ ವಿಷಯಗಳು ಇದರಲ್ಲಡಗಿವೆ; ಅರ್ಥವು ಅತ್ಯಂತ ಆಸಕ್ತಿದಾಯಕವಾಗಿದೆ.

**14.1**

**ಶ್ರೀಭಗವಾನುವಾಚ**
**ಪರಂ(ಮ್) ಭೂಯಃ(ಫ್) ಪ್ರವಕ್ಷ್ಯಾಮಿ, ಜ್ಞಾನಾನಾಂ(ಞ್) ಜ್ಞಾನಮುತ್ತಮಮ್**
**ಯಜ್.ಜ್ಞಾತ್ವಾ ಮುನಯಃ(ಸ್) ಸರ್ವೇ,ಪರಾಂ(ಮ್) ಸಿದ್ಧಿಮಿತೋ ಗತಾಃ ॥1॥**

ಭಗವಂತನು ಹೇಳಿದನು - ಎಲೈ ಅರ್ಜುನ! ಯಾವುದನ್ನು ತಿಳಿದುಕೊಂಡ ಮುನಿಗಳೆಲ್ಲ ಈ ಸಂಸಾರದಿಂದ ಮುಕ್ತರಾಗಿ ಪರಮ ಶ್ರೇಷ್ಠ ಸಿದ್ಧಿಯನ್ನು ಪಡೆದುಕೊಂಡಿದ್ದಾರೆಯೋ ಅಂತಹ ಜ್ಞಾನಗಳಲ್ಲಿ ಅತ್ಯುತ್ತಮವಾದ ಪರಮಶ್ರೇಷ್ಠ ಜ್ಞಾನವನ್ನು ನಾನು ಪುನಃ ನಿನಗೋಸ್ಕರ ಹೇಳುವೆನು.

ನಮ್ಮಲ್ಲಿಯ ತ್ರಿಗುಣಗಳ ವಿವೇಚನೆ, ಅವುಗಳ ನಿರ್ವಹಣೆ ನಮ್ಮ ಶರೀರದಲ್ಲಿ ಹೇಗೆ ಆಗುತ್ತದೆ ಎಂಬ ಜ್ಞಾನವನ್ನು ಇದರಲ್ಲಿ ಹೇಳಲಾಗಿದೆ. ಈ ಜ್ಞಾನದ ದೆಸೆಯಿಂದ, ಸಂಸಾರದ ಸಕಲ ವೈವಿಧ್ಯತೆಯ ಕಾರಣತ್ವವನ್ನು ತಿಳಿಸಲಾಗಿದೆ.

ಈ ವೈವಿಧ್ಯತೆಯು ಮೂರು ಗುಣಗಳ ಪ್ರಭಾವದಿಂದ ಆಗುತ್ತದೆ. ಸಮಸ್ತ ಸೃಷ್ಟಿಯ ಆರಂಭವು ಈ ತ್ರಿಗುಣಗಳ ಅಂಶದಿಂದಲೇ ಆಗಿದೆ. ಹೀಗಾಗಿ ಈ ಮೂರು ಗುಣಗಳು ಬ್ರಹ್ಮಾಂಡ ನಿರ್ಮಾಣದ ಉಪಾದಾನ ಕಾರಣಗಳಾಗಿವೆ. ಸೃಷ್ಟಿಯ ವೈವಿಧ್ಯತೆಗಳಿಗೆ ಈ ಮೂರು ಗುಣಗಳೇ ಕಾರಣೀಭೂತ. ವ್ಯಕ್ತ-ಅವ್ಯಕ್ತ ಎಲ್ಲ ರೀತಿಯ ವಸ್ತುಗಳು ಮತ್ತು ಅವುಗಳಲ್ಲಿನ ವೈವಿಧ್ಯತೆ ಈ ಮೂರು ಗುಣಗಳ ಸಂಯೋಜನೆಯಿಂದಲೇ ಆಗುತ್ತವೆ.

ಇದಕ್ಕೆ ಒಂದು ಸರಳವಾದ ಉದಾಹರಣೆ ಎಂದರೆ ಕಲರ್ ಪ್ರಿಂಟರ್. ಇದರಲ್ಲಿ ಕೇವಲ ೪ ಬಣ್ಣಗಳ ಸಂಯೋಜನೆ ಇರುತ್ತದೆ. C - ಸಯಾನ್ (Cyan), M - ಮೆಜೆಂಟ, Y - ಎಲ್ಲೋ (Yellow) ಮತ್ತು K - ಬ್ಲಾಕ್ (Black). ಈ ರೀತಿಯ ಸಂಯೋಜನೆಯಿಂದ ನಾನಾ ಬಗೆಯ ಕಲರ್ ಪ್ರಿಂಟ್ಸ್ ತೆಗೆಯಬಹುದು.

ನಮ್ಮ ಮೊಬೈಲ್ ಸ್ಕ್ರೀನಿನಲ್ಲಿ ೧.೬ ಕೋಟಿ ಬಣ್ಣಗಳ ಸಂಯೋಜನೆ ವೈವಿಧ್ಯತೆಯನ್ನು ನೋಡಬಹುದು. ಆದರೆ ಇದಕ್ಕೆ ಬೇಕಾದ ಬಣ್ಣಗಳು ಕೇವಲ ಮೂರು - ಕೆಂಪು, ಹಸಿರು ಮತ್ತು ನೀಲಿ. ಇದು ಮನುಷ್ಯನಿಂದ ಸೃಷ್ಟಿಸಲ್ಪಟ್ಟ ಬಣ್ಣಗಳ ಸಂಯೋಜನೆ. ಇದರಿಂದ ಅನೇಕ ರೀತಿಯ ಬಣ್ಣಗಳ ವೈವಿಧ್ಯತೆಯನ್ನು ರಚಿಸಬಹುದಾಗಿದೆ.

ಇದೇ ರೀತಿಯ ಸಿದ್ಧಾಂತ ಸೃಷ್ಟಿಯ ವೈವಿಧ್ಯತೆಯಲ್ಲಿ ನೋಡಲು ಸಿಗುತ್ತದೆ. ಹೀಗೆ ಈ ತ್ರಿಗುಣಗಳಿಂದ ಬ್ರಹ್ಮಾಂಡದಲ್ಲಿ ಅನೇಕ ಕೋಟಿ ವರ್ಷಗಳ ಕಾಲ ಪರ್ಯಂತ, ೮೪ ಲಕ್ಷ ಯೋನಿಗಳಲ್ಲಿ ಜೀವಿಗಳ ಅನೇಕ ವೈವಿಧ್ಯತೆಯನ್ನು ಕಾಣಬಹುದು. ೮೪ ಲಕ್ಷ ಯೋನಿಗಳಲ್ಲಿ ಪ್ರತಿಯೊಬ್ಬ ಮನುಷ್ಯನ ಮುಖದ ಲಕ್ಷಣವು ಅನನ್ಯವಾಗಿರುತ್ತದೆ. ಒಬ್ಬರದರ ಹಾಗೆ ಇನ್ನೊಬ್ಬರದಿರುವುದಿಲ್ಲ. ಪ್ರತಿಯೊಬ್ಬ ಮನುಷ್ಯನ ಬೆರಳಚ್ಚು (ಫಿಂಗರ್ ಪ್ರಿಂಟ್) ಕೂಡ ಅನನ್ಯ. ಒಬ್ಬರದು ಇನ್ನೊಬ್ಬರದಕ್ಕೆ ಹೊಂದಾಣಿಕೆಯಾಗುವುದಿಲ್ಲ. ಪ್ರಪಂಚದಲ್ಲಿನ ಅನೇಕ ಜಾತಿಯ ವೃಕ್ಷಗಳಲ್ಲಿಯ ಎಲೆಗಳೂ ವಿಭಿನ್ನವಾಗಿರುತ್ತವೆ. ಒಂದರದು ಇನ್ನೊಂದನ್ನು ಹೋಲುವುದಿಲ್ಲ. ಜಲಚರ ಪ್ರಾಣಿಯಾದ ಮೀನುಗಳ ಅನೇಕ ಜಾತಿ, ಉಪಜಾತಿಗಳು ಇನ್ನೂ ಮನುಷ್ಯರ ಗಣನೆಗೆ ಸಿಕ್ಕಿಲ್ಲ.

ಇಷ್ಟೊಂದು ವಿವಿಧತೆಯನ್ನು ಹೊಂದಿರುವ ಭಗವಂತನ ಸೃಷ್ಟಿಯು, ಅನಂತವಾಗಿದೆ. ಇಲ್ಲಿನ ಪ್ರತಿಯೊಂದು ವಸ್ತುವೂ ವಿಭಿನ್ನವಾಗಿದೆ, ಅನೇಕತೆಯನ್ನು ಹೊಂದಿದೆ. ಆದರೆ ಮನುಷ್ಯನ ಚಿಂತನೆಯ ಸ್ತರವು ಅತ್ಯಂತ ಸೀಮಿತವಾಗಿದೆ. ಭಗವಂತನ ಪ್ರಕೃತಿಯ ಅನಂತತ್ವ ಮತ್ತು ಅನೇಕತ್ವ ಭಾವವನ್ನು ಮನುಷ್ಯನ ಸೀಮಿತ ಬುದ್ಧಿಯು ಪರಿಗಣನೆ ಮಾಡಲು ಸಾಧ್ಯವಿಲ್ಲ.

ಈ ರೀತಿಯ ವೈವಿಧ್ಯಮಯವಾದ ಸೃಷ್ಟಿಯ ಕಾರ್ಯ ವೈಖರಿಯ ಬಗ್ಗೆ ಶ್ರೀಕೃಷ್ಣನು ಅರ್ಜುನನಿಗೆ ಪುನಃ ತಿಳಿಸಲು ಪ್ರಾರಂಭಿಸುತ್ತಾನೆ.

**14.2**

**ಇದಂ(ಮ್) ಜ್ಞಾನಮುಪಾಶ್ರಿತ್ಯ, ಮಮ ಸಾಧರ್ಮ್ಯಮಾಗತಾಃ**
**ಸರ್ಗೇऽಪಿ ನೋಪಜಾಯಂತೇ, ಪ್ರಲಯೇ ನ ವ್ಯಥಂತಿ ಚ ॥2॥**

ಈ ಜ್ಞಾನವನ್ನು ಆಶ್ರಯಿಸಿ ನನ್ನ ಸ್ವರೂಪವನ್ನು ಪಡೆದುಕೊಂಡವರು ಸೃಷ್ಟಿಯ ಆದಿಯಲ್ಲಿ ಪುನಃ ಹುಟ್ಟುವುದಿಲ್ಲ ಮತ್ತು ಪ್ರಳಯಕಾಲದಲ್ಲಿಯೂ ಸಹ ವ್ಯಥೆ ಪಡುವುದಿಲ್ಲ. ಏಕೆಂದರೆ, ವಾಸುದೇವನಾದ ನನಗಿಂತ ಬೇರೆಯಾದ ಯಾವ ವಸ್ತುವೂ ಅವರ ದೃಷ್ಟಿಯಲ್ಲಿ ಇಲ್ಲವೇ ಇಲ್ಲ.

ಹೇ ಅರ್ಜುನ, ಯಾರು ಈ ಜ್ಞಾನವನ್ನು ಗ್ರಹಣ ಮಾಡುವರೋ, ಅವರು ನನ್ನ ಸ್ವರೂಪ ಸಾಧರ್ಮ್ಯವನ್ನು ಪ್ರಾಪ್ತಿ ಮಾಡಿಕೊಳ್ಳುವರು. ಸೃಷ್ಟಿಯ ಆದಿಯಲ್ಲಿ ಅವರ ಪುನರ್ಜನ್ಮವಾಗುವುದಿಲ್ಲ ಮತ್ತು ಪ್ರಳಯ ಕಾಲದಲ್ಲಿ ಅಂಥವರು ವಿಚಲಿತಗೊಳ್ಳುವುದಿಲ್ಲ. ಇಲ್ಲವೆಂದರೆ, ಮೋಕ್ಷಕಾಲದ ಪರ್ಯಂತ ಪುನಃ ಪುನಃ ಸೃಷ್ಟಿಯ ಬಂಧನದಲ್ಲಿರಬೇಕಾಗುತ್ತದೆ. ಪ್ರಳಯದಲ್ಲಿ ಅನೇಕ ಪ್ರಕಾರಗಳಿವೆ. ಅದರಲ್ಲಿ ನಿತ್ಯ ಪ್ರಳಯ ಒಂದಾಗಿದೆ. ಮನುಷ್ಯರು ರಾತ್ರಿಯ ನಿದ್ರೆಯಲ್ಲಿರುವಾಗ ನಿತ್ಯ ಪ್ರಳಯವೆನಿಸುವುದು. ರಾತ್ರಿಯ ಗಾಢವಾದ ನಿದ್ರೆಯಿಂದ ಎಚ್ಚೆತ್ತಾಗ, ಸ್ವಲ್ಪ ಕ್ಷಣ ತಾತ್ಕಾಲಿಕ ಸ್ಮೃತಿ ಹ್ರಾಸತೆಯ ಪರಿಸ್ಥಿತಿ ಅನುಭವಿಸುತ್ತಾರೆ. ಇಂತಹ ಪರಿಸ್ಥಿತಿಯಿಂದ ಹೊರ ಬರಲು ಕ್ಷಣಾವಕಾಶ ಹಿಡಿಯುತ್ತದೆ. ಇದರಂತೆ ಬೇರೆ ಬೇರೆ ಜೀವಿಗಳ ಕಾಲಚಕ್ರವೂ ಬೇರೆ ಬೇರೆಯಾಗಿದೆ.

ಒಂದು ಇರುವೆಯ ಕಾಲಚಕ್ರ ಮನುಷ್ಯನ ಕಾಲಚಕ್ರಕ್ಕಿಂತ ಭಿನ್ನವಾಗಿರುತ್ತದೆ. ಕೆಲವೊಂದು ಚಿಕ್ಕ ಕೀಟ ಜೀವಿಗಳ ಜೀವನ ಕಾಲಚಕ್ರವು ಕಿರಿದಾಗಿರುತ್ತದೆ. ಮನುಷ್ಯನ ಒಂದು ಚಿಟಿಕೆ ಕಾಲಾವಕಾಶದಲ್ಲಿ ಅವುಗಳ ಮೂರು ಪೀಳಿಗೆಗಳು ಮುಗಿದು ಹೋಗುತ್ತವೆ. ಇಂತಹ ವಿಚಿತ್ರ ಜೀವರಾಶಿಗಳು ತಮ್ಮ ಕಾಲಚಕ್ರದ ಅನುಸಾರ ಹುಟ್ಟುತ್ತವೆ ಮತ್ತು ನಾಶ ಹೊಂದುತ್ತವೆ.

ಮನುಷ್ಯರ ೧ ವರ್ಷ = ೩೬೦ ದಿನ = ದೇವತೆಗಳಿಗೆ ೧ ದಿನ. ನಮ್ಮ ಅರ್ಧ ವರ್ಷ ದೇವತೆಗಳಿಗೆ ೧ ದಿನ ಮತ್ತು ಇನ್ನರ್ಧ ವರ್ಷ ೧ ರಾತ್ರಿಯಾಗುತ್ತದೆ. ಪಿತೃಗಳ ೧ ದಿನ ಅಂದರೆ ಮನುಷ್ಯರ ೩೦ ದಿನಗಳು. ಹೀಗೆ ಲೆಕ್ಕ ಹಾಕುತ್ತ ಹೋದರೆ ಬ್ರಹ್ಮ ದೇವರ ೧ ದಿನ = ಮನುಷ್ಯರ ೪. ೩೨ ಬಿಲಿಯನ್ ವರ್ಷಗಳಾಗುತ್ತವೆ.

**<u>ಬ್ರಹ್ಮನ ೧ ದಿನದ ಕಾಲಾವಧಿಯನ್ನು ಈ ರೀತಿ ತಿಳಿಯಬಹುದು.</u>**

**ಕಲಿಯುಗ ೪ ಲಕ್ಷ ೩೨ ಸಾವಿರ ವರ್ಷಗಳು**
**ದ್ವಾಪರ ಯುಗ ೮ ಲಕ್ಷ ೬೪ ಸಾವಿರ ವರ್ಷಗಳು**
**ತ್ರೇತಾಯುಗ ೧೨ ಲಕ್ಷ ೯೬ ಸಾವಿರ ವರ್ಷಗಳು**
**ಸತ್ಯಯುಗ ೧೭ ಲಕ್ಷ ೨೮ ಸಾವಿರ ವರ್ಷಗಳು**
**ಈ ೪ ಯುಗಗಳ ಕಾಲ ಪರಿಗಣನೆಯ ಒಟ್ಟು ಸಂಖ್ಯೆ = ೪೩ಲಕ್ಷ ೨೦ ಸಾವಿರ ವರ್ಷಗಳು.**

ಇಂತಹ ೭೧ ಚತುರ್ಯುಗಗಳು ಕಳೆದರೆ ಒಬ್ಬ ಮನುವಿನ ಕಾಲಾವಧಿಗೆ ಸಮಾನವಾಗುತ್ತದೆ. ಅದಕ್ಕೆ ಮನ್ವಂತರ ಕಾಲ ಎಂದು ಕರೆಯುತಾರ್ರೆ. ಹಾಗೆಯೆ ೧೪ ಮನುಗಳ ಕಾಲಾವಧಿಗೆ ೧ ಬ್ರಹ್ಮ ದಿನವೆಂದು ಕರೆಯುವರು.

**ಮನುಷ್ಯ ಕಾಲಮಾನದಲ್ಲಿ ಬ್ರಹ್ಮನ ೧ ದಿನ = ೪.೩೨ ಬಿಲಿಯನ್ ವರ್ಷಗಳಾಗುತ್ತವೆ.**

ಈಗ ನಮ್ಮ ಕಲಿಯುಗದಲ್ಲಿ ೭ ನೇ ಮನುವಿನ ಕಾಲಾವಧಿ ನಡೆಯುತ್ತಾ ಇದೆ. ಇದು ವೈವಸ್ವತ ಮನುವಿನ ಕಾಲ. ಶ್ರೀ ಕೃಷ್ಣನು ೪ ನೇ ಅಧ್ಯಾಯದಲ್ಲಿ ವೈವಸ್ವತ ಮನುವಿನ ಉಲ್ಲೇಖವನ್ನು ಮಾಡುತ್ತಾನೆ. ನಾವು ಗೀತೆಯನ್ನು ಕಲಿಯುತ್ತಿರುವುದು ವೈವಸ್ವತ ಮನ್ವಂತರದಲ್ಲಿ. ಇದು ಬೇರೆ ಕಾಲದಲ್ಲಿ ಅಥವಾ ಕಲ್ಪದಲ್ಲಿ ಸಂಭವವಾಗುವುದಿಲ್ಲ. ಈಗ ಬ್ರಹ್ಮನ ಸರಿಯಾದ ಅರ್ಧ ಆಯುಷ್ಯದ ಕಾಲಾವಧಿಯಲ್ಲಿ ನಾವು ಸೃಷ್ಟಿಯ ಮೇಲಿದ್ದೇವೆ. ಹೀಗೆ ಬ್ರಹ್ಮನ ೧೦೦ ವರ್ಷಗಳಲ್ಲಿ (ಮನುಷ್ಯ ವರ್ಷಮಾನ ಕಾಲ = ೪. ೩೨ ಬಿಲಿಯನ್ x ೧೦೦ ವರ್ಷಗಳು), ಬ್ರಹ್ಮನ ಆಯುಷ್ಯ ಪೂರ್ತಿಯಾಗುತ್ತದೆ. ಹೀಗೆ ಬ್ರಹ್ಮನೂ ಕೂಡ ಅವನ ಕಾಲಾವಧಿಯ ೧೦೦ ವರ್ಷಗಳಾದ ನಂತರ ಶಾಂತನಾಗುತ್ತಾನೆ. ಇಲ್ಲಿ ಮೋಜಿನ ವಿಷಯವೆಂದರೆ, ಬ್ರಹ್ಮನಿಂದ ನಿರ್ಮಾಣಗೊಂಡ ಈ ಸಕಲ ಸೃಷ್ಟಿಯು, ಬ್ರಹ್ಮನ ಕೇವಲ ಒಂದು ದಿನ ಮಾತ್ರ ಅಸಿತ್ತ್ವದಲ್ಲಿರುತ್ತದೆ. ಬ್ರಹ್ಮನ ರಾತ್ರಿಯಾದಾಗ, ಅಂದರೆ ೪.೩೨ ಬಿಲಿಯನ್ ವರ್ಷಗಳು ಕಳೆದ ನಂತರ, ಯಾವಾಗ ಬ್ರಹ್ಮದೇವರು ಶಾಂತರಾಗುವರೋ ಆಗ, ಈ ಎಲ್ಲ ಸೃಷ್ಟಿಯು ಪ್ರಳಯದಲ್ಲಿ ಮುಳುಗುತ್ತದೆ. ಇದನ್ನು ವಿವೇಚಕರು ಸಾದೋಹರಣವಾಗಿ ತಿಳಿಸಿದ್ದಾರೆ. ಮನೆಯಲ್ಲಿ ಮಕ್ಕಳು ಆಟಿಕೆಯಲ್ಲಿ ಮಣ್ಣಿನ ಮುದ್ದೆಯಿಂದ (Clay) ಅನೇಕ ಆಕೃತಿಗಳನ್ನು ಮಾಡಿ ಆಟವಾಡುತ್ತಾರೆ. ರಾತ್ರಿಯಾದಾಗ ತಾಯಿಯು ಮಕ್ಕಳನ್ನು ಗದರಿಸಿ, ಮಲಗಲು ಹೇಳುತ್ತಾಳೆ. ಆ ಮಣ್ಣಿನ ಆಕೃತಿಗಳನ್ನು ಒಡೆದು ಒಂದು ಮುದ್ದೆ ಮಾಡುತ್ತಾಳೆ. ಅದನ್ನು ಒಂದು ಡಬ್ಬದಲ್ಲಿ ತೆಗೆದಿಡುತ್ತಾಳೆ. ಬೆಳಗ್ಗೆ ಮಗುವು ಎಚ್ಚೆತ್ತಾಗ ಮಣ್ಣಿನ ಮುದ್ದೆಯನ್ನು ಡಬ್ಬದಿಂದ ತೆಗೆದುಕೊಂಡು ಮತ್ತೆ ಅನೇಕ ಆಕೃತಿಗಳನ್ನು ಮಾಡುವ ಆಟ ಪ್ರಾರಂಭಿಸುತ್ತದೆ. ಈ ತೆರನಾಗಿ ಬ್ರಹ್ಮನೂ ತನ್ನ ದಿನದಲ್ಲಿ ವಿವಿಧ ವೈವಿಧ್ಯತೆಯುಳ್ಳ ಅನೇಕ ಯೋನಿಗಳ ಸಂರಚನೆ ಮಾಡಿ, ರಾತ್ರಿಯಾದಂತೆ ಅವನ ಎಲ್ಲ ರಚನೆಗಳನ್ನು ವಿಲೀನ ಮಾಡುತ್ತಾನೆ. ಈ ರೀತಿ ಬ್ರಹ್ಮನ ೧೦೦ ವರ್ಷಗಳ ಆಟವೇ ಅವನ ಸೃಷ್ಟಿಯಾಗಿದೆ.

**14.3**

**ಮಮ ಯೋನಿರ್ಮಹದ್ ಬ್ರಹ್ಮ, ತಸ್ಮಿನ್ಗರ್ಭಂ(ನ್) ದಧಾಮ್ಯಹಮ್**
**ಸಂಭವಃ(ಸ್) ಸರ್ವಭೂತಾನಾಂ(ನ್), ತತೋ ಭವತಿ ಭಾರತ ॥3॥**

ಹೇ ಅರ್ಜುನ, ನನ್ನ ಮಹತ್ ಬ್ರಹ್ಮರೂಪೀ ಪ್ರಕೃತಿ ಅರ್ಥಾತ್ ತ್ರಿಗುಣಮಯೀ ಮಾಯೆಯು ಎಲ್ಲ ಜೀವಿಗಳ

ಯೋನಿಯಾಗಿದೆ. ನಾನು ಆ ಯೋನಿಯಲ್ಲಿ ಚೇತನರೂಪೀ ಬೀಜವನ್ನು ಸ್ಥಾಪಿಸುತ್ತೇನೆ. ಆ ಜಡ ಮತ್ತು ಚೇತನಗಳ ಸಂಯೋಗದಿಂದ ಎಲ್ಲ ಜೀವಿಗಳ ಉತ್ಪತ್ತಿಯಾಗುತ್ತದೆ.

ಈ ಶ್ಲೋಕದಲ್ಲಿ ಮಹತ್ವಪೂರ್ಣವಾದ ಸಿದ್ಧಾಂತವನ್ನು ಭಗವಂತನು ಹೇಳುತ್ತಾನೆ. ಹೇ ಅರ್ಜುನ, ಈ ನನ್ನ ಮಹದ್ ಬ್ರಹ್ಮ ಪ್ರಕೃತಿಯು, ಸರ್ವಭೂತ ಜೀವರುಗಳ ಯೋನಿಯಾಗಿದೆ. ಇದು ಸ್ತ್ರೀ ರೂಪಿಯಾಗಿದ್ದು ಗರ್ಭದಾನದ ಸ್ಥಾನವಾಗಿದೆ. ನಾನು ಈ ಯೋನಿಯಲ್ಲಿ ಚೇತನರೂಪಿ ಗರ್ಭದ ಸ್ಥಾಪನೆಯನ್ನು ಮಾಡುವವನಾಗಿರುತ್ತೇನೆ. ಈ ರೀತಿ ಜಡ ಮತ್ತು ಚೇತನರ ಸಂಯೋಗದ ಫಲವಾಗಿ ಸರ್ವ ಜೀವಿಗಳ ಸೃಷ್ಟಿಯಾಗುತ್ತದೆ. ಈ ಸಂದರ್ಭದಲ್ಲಿ ಪಂಚತತ್ತ್ವಗಳಿಂದ ಹೇಗೆ ಈ ಸರ್ವ ಜಗತ್ತು ಉತ್ಪತ್ತಿಯಾಯಿತೆಂದು ತಿಳಿಯೋಣ.

ಇಲ್ಲಿ ಪಂಚತತ್ತ್ವ ಪಂಚತನ್ಮಾತ್ರೆ ಪಂಚಭೂತಗಳು ಮತ್ತು ಪಂಚೇಂದ್ರಿಯಗಳ ಉತ್ಪತ್ತಿಯ ವಿವರ ತಿಳಿಯೋಣ. ಯಾವಾಗ ಮಹದ್ಬ್ರಹ್ಮತತ್ತ್ವ ಪಂಚತತ್ತ್ವಗಳ ಸೃಷ್ಟಿಯನ್ನು ಆರಂಭಿಸಿತೋ, ಆಗ ಮೊದಲನೇ ತತ್ತ್ವವಾದ ಆಕಾಶತತ್ತ್ವ ಹುಟ್ಟಿಕೊಂಡಿತು. ಇದು ನಿರ್ವಾತವಾಗಿರುತ್ತದೆ. ಇದರಿಂದ "ಶಬ್ದ" ತನ್ಮಾತ್ರೆಯು ಉತ್ಪನ್ನವಾಯಿತು. ಶಬ್ದ ಗುಣವನ್ನು ಗ್ರಾಹ್ಯ ಮಾಡುವ ಇಂದ್ರಿಯ ಕರ್ಣ. ಹೀಗೆ ಶಬ್ದ ತನ್ಮಾತ್ರೆಯಿಂದ, ಆಕಾಶ ಮಹಾಭೂತದ ಉತ್ಪತ್ತಿಯಾಯಿತು ಮತ್ತು ಅದರಿಂದ ಕರಣೇಂದ್ರಿಯದ ಸೃಷ್ಟಿಯಾಯಿತು.

ಆಕಾಶದಿಂದ ವಾಯು ತತ್ತ್ವದ ಉತ್ಪತ್ತಿಯಾಯಿತು. ಇದರಲ್ಲಿ ೨ ಗುಣಗಳು ಸೇರಿಕೊಂಡವು - ಶಬ್ದ ಮತ್ತು ಸ್ಪರ್ಶ. ವಾಯು ತತ್ತ್ವದಲ್ಲಿ ಸ್ಪರ್ಶ ತನ್ಮಾತ್ರೆಯಿರುವುದರಿಂದ, ಸ್ಪರ್ಶನದ ಅನುಭೂತಿ ತ್ವಚೇಂದ್ರಿಯದ ಮೂಲಕ ಆಗುತ್ತದೆ. ಹೀಗೆ ಸ್ಪರ್ಶಗುಣದಿಂದ, ವಾಯು ಮಹಾಭೂತದ ಉತ್ಪತ್ತಿಯಾಗಿ, ಅದರಿಂದ ತ್ವಚೇಂದ್ರಿಯದ ಉತ್ಪತ್ತಿಗೆ ಕಾರಣವಾಗುತ್ತದೆ. ಆಕಾಶ ಮತ್ತು ವಾಯು ತತ್ತ್ವಗಳ ಸಂಯೋಗದಿಂದ ೩ನೇ ತತ್ತ್ವವಾದ ಅಗ್ನಿಯು ಉತ್ಪನ್ನವಾಯಿತು. ಅಗ್ನಿಯಲ್ಲಿ ಈಗ ೩ ಗುಣಗಳ ಸಮ್ಮಿಲನವಿರುತ್ತದೆ, ಶಬ್ದ ಸ್ಪರ್ಶ, ರೂಪ. ರೂಪ ತನ್ಮಾತ್ರೆಯಿಂದ, ಅಗ್ನಿ ಮಹಾಭೂತ ಮತ್ತು ನೇತ್ರಗಳ ಉತ್ಪನ್ನವಾಯಿತು. ಆಕಾಶ, ವಾಯು ಮತ್ತು ಅಗ್ನಿತತ್ತ್ವಗಳ ಸಮ್ಮಿಲನದಿಂದ ೪ನೇ ತತ್ವವಾದ ಜಲತತ್ತ್ವದ ನಿರ್ಮಾಣವಾಗುತ್ತದೆ. ಇದರ ಗುಣವು ರಸ. ರಸ ತನ್ಮಾತ್ರೆಯಿಂದ ಈ ಮಹಾಭೂತದ ಸೃಷ್ಟಿಯಾಗುತ್ತದೆ. ಇದರಲ್ಲಿ ೪ ಗುಣಗಳ ಮಿಶ್ರಣವಿರುತ್ತದೆ. ಶಬ್ದ ಸ್ಪರ್ಶ, ರೂಪ, ರಸ. ಈ ರೀತಿಯಾಗಿ ಜಲ ಮಹಾಭೂತದಲ್ಲಿ ಆಸ್ವಾದನೆ ಮಾಡುವ ಗುಣವೂ ಇರುತ್ತದೆ. ಈ ಮಹಾಭೂತದಿಂದ ಜಿಹ್ವಾ ಅಥವಾ ರಸನೇಂದ್ರಿಯದ ಉತ್ಪತ್ತಿಯಾಗುತ್ತದೆ. ಈ ೪ ತತ್ತ್ವಗಳು ಸೇರಿ ೫ನೇ ತತ್ತ್ವವಾದ ಪೃಥಿವಿಯನ್ನು ಸೃಷ್ಟಿಸುತ್ತವೆ. ಪೃಥ್ವಿಯಲ್ಲಿ ಗಂಧ ಗುಣ ಸೇರಿಕೊಂಡಿದ್ದು ನಾಸಿಕ ಇಂದ್ರಿಯದ ಮೂಲಕ ಗಂಧ ಜ್ಞಾನವು ಉಂಟಾಗುತ್ತದೆ. ಪೃಥ್ವಿಯಲ್ಲಿ ಶಬ್ದ ಸ್ಪರ್ಶ, ರೂಪ, ರಸ, ಮತ್ತು ಗಂಧ ಈ ೫ ಗುಣಗಳ ಸಮ್ಮಿಶ್ರಣವಿರುತ್ತದೆ.

ಕೆಳಗಿನ ಕೋಷ್ಟಕವು ಪಂಚತತ್ವಗಳ ಉತ್ಪತ್ತಿಯ ವಿವರ ನೀಡುತ್ತದೆ.

| **ತತ್ತ್ವ** | **ತನ್ಮಾತ್ರೆ** | **ಪಂಚಭೂತ** | **ಪಂಚೇಂದ್ರಿಯ** |
|---|---|---|---|
| ಆಕಾಶ | ಶಬ್ದ | ಆಕಾಶ ಮಹಾಭೂತ | ಕರ್ಣೇಂದ್ರಿಯ |
| ವಾಯು | ಸ್ಪರ್ಶ | ವಾಯು ಮಹಾಭೂತ | ಸ್ಪರ್ಶೇಂದ್ರಿಯ |
| ಅಗ್ನಿ | ರೂಪ | ಅಗ್ನಿ ಮಹಾಭೂತ | ನೇತ್ರ ಇಂದ್ರಿಯ |
| ಜಲ | ರಸ | ಜಲ ಮಹಾಭೂತ | ರಸನೇಂದ್ರಿಯ / ಜಿಹ್ವಾ |
| ಪೃಥ್ವಿ | ಗಂಧ | ಪೃಥ್ವಿ ಮಹಾಭೂತ | ನಾಸಿಕ ಇಂದ್ರಿಯ |

ಹೀಗೆ ಪಂಚತತ್ತ್ವದಿಂದ ಪಂಚತನ್ಮಾತ್ರೆಗಳು, ತನ್ಮಾತ್ರೆಗಳಿಂದ ಮಹಾಭೂತಗಳು, ಮಹಾಭೂತಗಳಿಂದ ಇಂದ್ರಿಯಗಳ ಉತ್ಪತ್ತಿಯಾಗಿದೆ.

**14.4**

### ಸರ್ವಯೋನಿಷು ಕೌಂತೇಯ, ಮೂರ್ತಯಃ(ಸ್) ಸಂಭವಂತಿ ಯಾಃ

## ತಾಸಾಂ(ಮ್) ಬ್ರಹ್ಮ ಮಹದ್ಯೋನಿಃ(ರ್),ಅಹಂ(ಮ್) ಬೀಜಪ್ರದಃ(ಫ್) ಪಿತಾ ॥4॥

ಅರ್ಜುನನೇ, ನಾನಾ ಪ್ರಕಾರದ ಯೋನಿಗಳಲ್ಲೆಲ್ಲಾ ಎಷ್ಟು ಶರೀರಗಳು ಉತ್ಪತ್ತಿಯಾಗುತ್ತವೆಯೋ ಅವುಗಳಿಗೆ ತ್ರಿಗುಣಮಯೀ ಮಾಯೆಯು ಗರ್ಭಧರಿಸುವ ತಾಯಿ. ನಾನು ಬೀಜ ಸ್ಥಾಪಿಸುವ ತಂದೆ.

ಭಗವಂತನು ಸೃಷ್ಟಿ ಉತ್ಪತ್ತಿಯ ವಿವರಣೆಯನ್ನು ಮುಂದುವರಿಸುತ್ತಾ ಜಗತ್ತಿನಲ್ಲಿ ಅನಂತ ಯೋನಿಗಳ ಉತ್ಪತ್ತಿಯಾಗಲು ಜಡ ಮತ್ತು ಪ್ರಕೃತಿಯ ಸಂಯೋಗವಾಯಿತು. ಈ ಎಲ್ಲ ಯೋನಿಗಳನ್ನು ಸ್ಥೂಲವಾಗಿ ೪ ವಿಭಾಗಗಳಲ್ಲಿ ವಿಭಜನೆ ಮಾಡಬಹುದು.
೧) ಅಂಡಜ - ಜೀವಗಳ ಉತ್ಪತ್ತಿಯು ಅಂಡ(ತತ್ತಿ)ದಿಂದ ಆಗುತ್ತದೆ.
ಉದಾ - ಪಕ್ಷಿಗಳು, ಜಲಚರಗಳಾದ ಆಮೆ, ಸರಿಸೃಪಗಳು
೨) ಪಿಂಡಜ - ಜೀವಿಗಳ ಉತ್ಪತ್ತಿಯು ಗರ್ಭದಿಂದ ಆಗುತ್ತದೆ.
ಉದಾ - ಮನುಷ್ಯ, ಕೆಲವೊಂದು ಜಲಚರ ಪ್ರಾಣಿಗಳು - ತಿಮಿಂಗಲ, ಶಾರ್ಕ್ ಮುಂತಾದವುಗಳು, ಸಸ್ತನಿ ಪ್ರಾಣಿಗಳು
೩) ಸ್ವೇದಜ - ಬೆವರಿನಿಂದ ಜೀವಿಗಳು ಉತ್ಪನ್ನವಾಗುತ್ತವೆ.
ಉದಾ - ಬ್ಯಾಕ್ಟೀರಿಯಾ, ವೈರಸ್ ಮುಂತಾದವುಗಳು.
೪) ಉದ್ಭಿಜ - ಭೂಮಿಯನ್ನು ಸೀಳಿಕೊಂಡು ಜೀವಿಗಳು ಉತ್ಪನ್ನವಾಗುವೆ
ಉದಾ - ವೃಕ್ಷಗಳು, ಗಿಡಗಳು, ಮುಂತಾದ ಸ್ಥಾವರ ಜೀವಿಗಳು

ಜಗತ್ತಿನಲ್ಲಿ ಈ ೪ ಯೋನಿಗಳ ಅತಿರಿಕ್ತ ಬೇರೊಂದಿಲ್ಲ. ಎಲ್ಲ ರೀತಿಯ, ಜಾತಿಯ, ಪ್ರಜಾತಿಯ ಪ್ರಾಣಿಗಳು ಈ ೪ ಯೋನಿಗಳಲ್ಲಿ ಸಮಾವಿಷ್ಟವಾಗುತ್ತವೆ. ಈ ೪ ಯೋನಿಗಳಲ್ಲಿ ಎಲ್ಲ ನಭಚರ, ಜಲಚರ, ಸ್ಥಾವರ, ಜಂಗಮ ಜೀವಿಗಳೂ ಮತ್ತು ಪಂಚತತ್ತ್ವ ಪ್ರಾಣಿಗಳಾದ ಮಾನವ, ಪ್ರಕಾಶ ತತ್ತ್ವದಿಂದ ನಿರ್ಮಾಣವಾದ ದೇವತೆಗಳು, ವಾಯು ತತ್ತ್ವದಿಂದ ನಿರ್ಮಾಣವಾದ ಭೂತಾದಿ ಜೀವಿಗಳು, ೧೪ ಲೋಕದ ಅನೇಕ ರೀತಿಯ ಜೀವಿಗಳು ಹೀಗೆ ಸಮಸ್ತ ಜೀವಿಗಳು, ಅವುಗಳ ಅನಂತ ಪ್ರಕಾರದ ಪ್ರಭೇದಗಳು ಜನಿಸುತ್ತವೆ. ಇವೆಲ್ಲವೂ ಪ್ರಕೃತಿತತ್ತ್ವದ ವೈವಿಧ್ಯತೆಗಳು. ಈ ಎಲ್ಲ ಸಮಸ್ತ ಯೋನಿಗಳ ಪಿತಾ ನಾನೇ ಆಗಿದ್ದೇನೆ ಮತ್ತು ಇವುಗಳ ಮಾತೆಯು ಮಹದ್ ಬ್ರಹ್ಮ ಪ್ರಕೃತಿಯಾಗಿದೆ ಎಂದು ಶ್ರೀ ಕೃಷ್ಣ ಪರಮಾತ್ಮನು ಈ ಪಂಚತತ್ತ್ವದ ಜ್ಞಾನವನ್ನು ತಿಳಿಸುತ್ತಾನೆ.

**14.5**

## ಸತ್ತ್ವಂ(ಮ್) ರಜಸ್ತಮ ಇತಿ, ಗುಣಾಃ(ಫ್) ಪ್ರಕೃತಿಸಂಭವಾಃ
## ನಿಬಧ್ನಂತಿ ಮಹಾಬಾಹೋ, ದೇಹೇ ದೇಹಿನಮವ್ಯಯಮ್ ॥5॥

ಎಲೈ ಅರ್ಜುನ! ಸತ್ವಗುಣ, ರಜೋಗುಣ, ಮತ್ತು ತಮೋಗುಣ ಎಂಬ ಪ್ರಕೃತಿಯಿಂದ ಉತ್ಪನ್ನವಾದ ಮೂರು ಗುಣಗಳು ಅವಿನಾಶಿಯಾದ ಜೀವಾತ್ಮನನ್ನು ಶರೀರದಲ್ಲಿ ಬಂಧಿಸುತ್ತವೆ.

ಈಗ ಭಗವಂತನು ಮೌಲಿಕ ಸೂತ್ರಗಳ ವಿಚಾರಧಾರೆಯನ್ನು ಹೇಳುತ್ತಾನೆ. ಸತ್ವ ರಾಜಸ ಮತ್ತು ತಾಮಸ ಈ ಮೂರು ಗುಣಗಳು ಪ್ರಕೃತಿಯಿಂದಲೇ ಉತ್ಪನ್ನವಾಗಿವೆ. ಇಲ್ಲಿ ಒಂದು ಪ್ರಶ್ನೆ ಉದ್ಭವವಾಗುತ್ತದೆ. ಜೀವಾತ್ಮನು ಅವಿನಾಶಿಯೂ, ಅವ್ಯಯನೂ, ನಿಶ್ಚಲನೂ ಆಗಿದ್ದಾನೆ. ತನ್ನ ಸ್ವರೂಪದಲ್ಲಿ ಯಾವತ್ತೂ ಕೃಶ ಅಥವಾ ಸ್ಥೂಲವಾಗುವುದಿಲ್ಲ. ಯಾವುದೇ ಶಸ್ತ್ರದಿಂದ ನಾಶವಾಗುವುದಿಲ್ಲ. ಆದರೂ ಮರಣ ಧರ್ಮವಾದ ಶರೀರವನ್ನು ಹೇಗೆ ಧರಿಸುತ್ತಾನೆ? ಚೇತನ ತತ್ತ್ವವು ಅವಿನಾಶಿಯಾಗಿದ್ದು ಸದಾಕಾಲ ನಾಶ ಹೊಂದುತ್ತಿರುವ ಜಡ ತತ್ವದ ಜೊತೆಗೆ ಹೇಗೆ ಸಂಯೋಗ ಹೊಂದುತ್ತದೆ? ಆತ್ಮತತ್ತ್ವವು ಈ ಜಡತತ್ತ್ವ ಶರೀರದಲ್ಲಿ ಹೇಗೆ ಸೇರಿಕೊಳ್ಳುತ್ತದೆ? ಈ ರೀತಿಯಾದ ಪ್ರಶ್ನೆಗಳು, ಸಂದೇಹಗಳು ಮೂಡುವುದು ಸಹಜ. ಇಂತಹ ಎಲ್ಲ ಪ್ರಶ್ನೆಗಳಿಗೆ ಶ್ರೀಕೃಷ್ಣನ ಉತ್ತರ - ಸತ್ವ ರಜಸ್ ಮತ್ತು ತಮಸ್ ಗುಣಗಳ ಸಂಯೋಗವೇ ಈ ಆತ್ಮತತ್ತ್ವವನ್ನು ಬಂಧಿಸಿಡುವಂಥ ಶಕ್ತಿ ಎಂಬುದಾಗಿದೆ. This is the binding zone. ಈ ತತ್ತ್ವಗಳಿಂದ ಜೀವಾತ್ಮತತ್ತ್ವವು ಶರೀರದ ಬಂಧನದಲ್ಲಿರುತ್ತದೆ. ಮನುಷ್ಯನ ಭಾವನೆಗಳು ಕೊನೆಯ ಸಮಯದಲ್ಲಿ ಯಾವ ರೀತಿಯ ಭಾವನೆಗಳನ್ನು ಹೊಂದಿರುತ್ತವೆಯೋ ಅದೇ ಭಾವನೆಗಳು ಅವನನ್ನು ಮುಂಬರುವ ಯೋನಿಗಳ ಆಯ್ಕೆಯನ್ನು ನಿರ್ಧರಿಸುತ್ತವೆ.

ಇಲ್ಲಿ ವಿವೇಚಕರು ಮನುಷ್ಯನ ವಿವಿಧ ಭಾವನೆಗಳ ವಿಚಾರಗಳನ್ನು ಪ್ರಸ್ತುತಪಡಿಸುತ್ತಾರೆ. ಬಹಳ ಸ್ವಾರ್ಥ

ಸ್ವಭಾವದ ಮನುಷ್ಯನು ಮುಂದಿನ ಜನ್ಮದಲ್ಲಿ ಗಿಳಿಯಾಗಿ ಹುಟ್ಟುವ ಸಂಭವ ಇರುತ್ತದೆ. ಆದರೆ ಗಿಳಿಯು ಅತ್ಯಂತ ಸುಂದರ, ಪ್ರೀತಿಕರ; ಅದನ್ನು ಎಷ್ಟೊಂದು ಪ್ರೀತಿಯಿಂದ ಸಾಕಿದರೂ, ಸಲುಹಿದರೂ, ಒಳ್ಳೆಯ ಮಾತುಗಳನ್ನಾಡಿದರೂ, ಪಂಜರದ ಬಾಗಿಲು ತೆರೆದ ಕೂಡಲೇ ಎಲ್ಲವನ್ನು ಮರೆತು ಹಾರಿ ಹೋಗುತ್ತದೆ. ಮತ್ತೆಂದೂ ತಿರುಗಿ ಬರುವುದಿಲ್ಲ. ಸ್ವಾರ್ಥಿ ವ್ಯಕ್ತಿಯ ಗುಣಗಳೂ, ಭಾವನೆಗಳೂ ಗಿಳಿಯಂತೆಯೇ ಇರುತ್ತವೆ.

ವಿವೇಚಕರು ಇಲ್ಲಿ ಇನ್ನೊಂದು ಉದಾಹರಣೆಯನ್ನು ಪ್ರಸ್ತಾಪಿಸುತ್ತಾರೆ. ಯಾರು ಮಕ್ಕಳ ಅಥವಾ ಸಂಬಂಧಗಳ ಮೋಹದಲ್ಲಿ ಬೀಳುತ್ತಾರೋ, ಅಂಥವರು ಕುಕ್ಕುರು ಯೋನಿಯಲ್ಲಿ (ನಾಯಿ ಯೋನಿಯಲ್ಲಿ) ಜನ್ಮಿಸುತ್ತಾರೆ ಎಂಬುದು ಶಾಸ್ತ್ರ ಪ್ರತೀತಿ.

ಸಂತ ಗೋಸ್ವಾಮಿ ದಾಸರು ತಮ್ಮ ಚೌಪಾಯಿ ಮಾನಸದಲ್ಲಿ ಹೀಗೆ ಹೇಳುತ್ತಾರೆ :

**ಸೋ ಮಾಯಾ ಬಸ ಭಯಂಗೋ ಸಾಯಿ ।**
**ಬಂಧೇ ಹೊ ಕೀರಾ ಮರಕಟಕಿ ನಾಯಿ ।।**

ಇಲ್ಲಿ "ಕೀರ" ಅಂದರೆ ಪಕ್ಷಿ. ಬೇಟೆಗಾರನು ಆಕಾಶದಲ್ಲಿ ಹಾರಡುವ ಪಕ್ಷಿಯನ್ನು ಹಿಡಿಯಲು ಒಂದು ಸಣ್ಣ ಯಂತ್ರ ಮಾಡಿರುತ್ತಾನೆ. ಒಂದು ಚಿಕ್ಕ ಸ್ಟ್ಯಾಂಡನ್ನು ನೆಲದ ಮೇಲಿಟ್ಟು, ಅದರ ಮಧ್ಯದಲ್ಲಿ ಸಣ್ಣದಾದ ಒಂದು ತಂತಿಯನ್ನು ಕಟ್ಟಿರುತ್ತಾನೆ. ಈ ಯಂತ್ರವನ್ನು ನೆಲದ ಮೇಲಿಟ್ಟು, ಅದರ ಸುತ್ತಲೂ ಧಾನ್ಯದ ಕಾಳುಗಳನ್ನು ಎಲ್ಲೆಡೆ ಚೆಲ್ಲುತ್ತಾನೆ. ಪಕ್ಷಿಯು ತಂತಿಯ ಮೇಲೆ ಧಾನ್ಯವನ್ನು ತಿನ್ನಲು ಕುಳಿತಾಗ ತನ್ನ ತಲೆಯನ್ನು ಸಹಜವಾಗಿ ಕೆಳಗೆ ಮಾಡಬೇಕಾಗುತ್ತದೆ. ಇದರಿಂದ ತಂತಿಯು ಮೇಲೆ ಕೆಳಗೆ ಹೊರಳುತ್ತದೆ. ಇದರಿಂದ ಪಕ್ಷಿಯು ಹೆದರಿಕೊಂಡು ತಂತಿಯನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತದೆ. ಇಲ್ಲಿ ಪಕ್ಷಿಯು ತಾನೇ ತಂತಿಯನ್ನು ಜೋರಾಗಿ ಹಿಡಿಯುತ್ತದೆ. ತಂತಿಯು ಪಕ್ಷಿಯನ್ನು ಹಿಡಿಯುವುದಿಲ್ಲ. ಅಲ್ಪ ಬುದ್ಧಿಯ ಕಾರಣ, ಕೇವಲ ಧಾನ್ಯದ ಆಸೆಯಿಂದ ಅದು ಬಂಧಿಸಲ್ಪಡುತ್ತದೆ ಮತ್ತು ಬೇಟೆಗಾರನ ವಶವಾಗುತ್ತದೆ. ಹೀಗೆಯೇ ನಮ್ಮ ಆತ್ಮತತ್ತ್ವವು ಶರೀರದಲ್ಲಿ ಬಂಧನಕ್ಕೆ ಒಳಗಾಗುತ್ತದೆ. ಈ ತ್ರಿಗುಣಗಳೆಂಬ ತಂತಿಯು ಇದನ್ನು ಬಂಧನಕ್ಕೆ ಒಳಪಡಿಸಿ, ನಮ್ಮ ಸಂಸ್ಕಾರಗಳ ಲೇಪನದಿಂದ ಶರೀರ ಬಂಧನದಲ್ಲಿ ಇರಿಸುತ್ತವೆ.

ಗುರು ಗೋಸ್ವಾಮಿ ದಾಸರು ತಮ್ಮ ಚೌಪಾಯಿಯಲ್ಲಿ ಇನ್ನೊಂದು ಪ್ರಾಣಿಯ ಉದಾಹರಣೆಯನ್ನು ನೀಡುತ್ತಾರೆ. ಕೋತಿಯ ಬೇಟೆ ಮಾಡುವವರು ಭೂಮಿಯಲ್ಲಿ ಸಣ್ಣ ಗುಂಡಿಯನ್ನು ತೋಡಿ ಅದರಲ್ಲಿ ಹೂಜಿಯಾಕಾರದ ಪಿಪಾಯಿಯನ್ನು ಅದರಲ್ಲಿ ಅಳವಡಿಸುತ್ತಾರೆ. ಅದರ ಸುತ್ತಲೂ ಕಡಲೆಬೀಜಗಳನ್ನು ಹಾಕುತ್ತಾರೆ. ಹೂಜಿಯನ್ನು ಕಡಲೆಬೀಜಗಳಿಂದ ತುಂಬುತ್ತಾರೆ. ಕೋತಿಯು ಕಡಲೆ ಬೀಜದ ಆಸೆಗೆ ಬಂದು, ಕೈಯ್ಯನ್ನು ಆ ಗುಂಡಿಗೆ ಹಾಕಿ ಕಡಲೆ ಬೀಜ ತೆಗೆದುಕೊಂಡ ನಂತರ ಕೈಯ್ಯನ್ನು ಮೇಲೆತ್ತುವುದು ಕಠಿಣವಾಗುತ್ತದೆ. ಆ ಹೂಜಿಯಲ್ಲಿ ತನ್ನ ಕೈ ಸಿಕ್ಕಿಹಾಕಿಕೊಂಡಿದ್ದು ಕೋತಿಗೆ ತಿಳಿಯುವ ಮೊದಲೇ ಅದು ಬೇಟೆಗಾರನ ವಶವಾಗುತ್ತದೆ.

ಹೀಗೆ ನಾವೂ ಕೂಡ ನಮ್ಮ ಇಚ್ಛೆ, ಕಾಮನೆಗಳು, ರಾಗ, ದ್ವೇಷಾದಿಗಳೆಂಬ ಕಡಲೆ ಬೀಜಗಳನ್ನು ಬಿಡಲಾರದೆ, ತಿನ್ನಲೂ ಬಾರದ ಪರಿಸ್ಥಿತಿಯಲ್ಲಿ ಪುನಃ ಪುನಃ ಜನ್ಮ - ಮರಣದ ಬಂಧನದಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೆ.

**14.6**

## ತತ್ರ ಸತ್ತ್ವಂ(ನ್) ನಿರ್ಮಲತ್ವಾತ್, ಪ್ರಕಾಶಕಮನಾಮಯಮ್
## ಸುಖಸಂಗೇನ ಬಧ್ನಾತಿ, ಜ್ಞಾನಸಂಗೇನ ಚಾನಘ ॥6॥

ಎಲೈ ಪಾಪರಹಿತನೇ! ಆ ಮೂರು ಗುಣಗಳಲ್ಲಿ ಸತ್ವಗುಣವು ಪ್ರಕಾಶಪಡಿಸಬಲ್ಲ ನಿರ್ವಿಕಾರೀ ನಿರ್ಮಲವಾದ ಕಾರಣ ಸುಖದ ಆಸಕ್ತಿಯಿಂದ ಮತ್ತು ಜ್ಞಾನದ ಆಸಕ್ತಿಯಿಂದ ಅರ್ಥಾತ್ ಜ್ಞಾನದ ಅಭಿಮಾನದಿಂದ ಆತ್ಮನನ್ನು ಬಂಧಿಸುತ್ತದೆ.

ಇನ್ನು ಶ್ರೀ ಕೃಷ್ಣನು ಸತ್ವ ಗುಣದ ಪ್ರಭಾವದಿಂದ ಮನುಷ್ಯನ ಸ್ವಭಾವ ಹೇಗಿರುತ್ತದೆ ಎಂದು ಹೇಳುತ್ತಾನೆ. ಹೇ ಅನಘ, ಈ ಮೂರು ಗುಣಗಳಲ್ಲಿ ಸತ್ವ ಗುಣವು ಅತ್ಯಂತ ನಿರ್ಮಲ ಮತ್ತು ಶುದ್ಧವಿರುವ ಕಾರಣ, ಪ್ರಕಾಶಯುಕ್ತವಾಗಿದೆ. ವಿಕಾರರಹಿತವಾಗಿದೆ. ಆದ್ದರಿಂದ ಸುಖದ ಸಂಬಂಧದಿಂದ ಮತ್ತು ಜ್ಞಾನದಿಂದ

ಮನುಷ್ಯನನ್ನು ಬಂಧನದಲ್ಲಿಡುತ್ತದೆ. ಸುಖದ ಪ್ರತೀತಿಯು ಸತ್ವದ ಅಂಶವನ್ನು ತೋರಿಸುತ್ತದೆ. ಹಾಗೆಯೇ ಮನುಷ್ಯನು ಮದ್ಯಪಾನದಿಂದ ಸಂತೋಷವನ್ನು ಅನುಭವಿಸುತ್ತಾನೆ. ಆದರೆ ಅವನ ವೃತ್ತಿ ಮತ್ತು ಚೇಷ್ಟೆಯು ಸಾತ್ವಿಕವಾಗಿರುವುದಿಲ್ಲ. ಆದರೆ ಅದೇ ಸುಖವನ್ನು ಗೀತಾ ಪಠಣದಲ್ಲಿ ಅನುಭವಿಸಿದರೆ ಅದು ಸಾತ್ವಿಕ ಚೇಷ್ಟೆ ಎನಿಸುತ್ತದೆ. ಈ ಎರಡೂ ಸಂದರ್ಭದಲ್ಲಿ ಮನುಷ್ಯನು ಸುಖದ ಪ್ರವೃತ್ತಿಯಲ್ಲಿ ತೊಡಗುತ್ತಾನೆ. ಆದರೆ ಕೊನೆಗೆ ಸಾತ್ವಿಕವಾದ ವೃತ್ತಿಯಿಂದಲೇ ಸುಖ ಪ್ರಾಪ್ತಿಯಾಗುವುದು. ಸತ್ವವು ಸುಖದ ಮೂಲವಾಗಿದೆ. ಆದರೆ ಸತ್ವದ ಈ ಸ್ವಭಾವದಿಂದ ಆತ್ಮತತ್ತ್ವವು ಬಂಧಿತವಾಗುತ್ತದೆ. ಸುಖದ ಅಭಿಮಾನದಿಂದ ಬಂಧಿತವಾಗುತ್ತದೆ. ಸತ್ವ ಗುಣ ಪ್ರಕಾಶಯುಕ್ತವಾಗಿರುತ್ತದೆ. ಸಾಧು ಸಂತರಲ್ಲಿ ಸತ್ವಗುಣ ಪ್ರಾಬಲ್ಯತೆ ಪಡೆದಿರುವುದರಿಂದ, ಅವರಲ್ಲಿ ಸತ್ಯವಾದ ಜ್ಞಾನವನ್ನು ಜಾಗೃತ ಮಾಡುವ ಶಕ್ತಿ ಇರುತ್ತದೆ. ಇವರ ಬುದ್ಧಿಯನ್ನು ಪ್ರಜ್ಞಾವಾನ್ ಎಂದು ಕರೆದಿರುವರು.

ಯಾವ ಸಮಯದಲ್ಲಿ ನಿದ್ರೆಯ ಪ್ರಮಾಣ ಕಡಿಮೆಯಾಗುತ್ತದೋ, ಗೀತಾ ಪಠಣ, ಶ್ರವಣ ಕ್ರಿಯೆಗಳಲ್ಲಿ ಆಸಕ್ತಿ ಉಂಟಾಗಲು ಶುರುವಾಗುತ್ತದೋ, ಸಾತ್ವಿಕ ಅಂಶದ ಪ್ರಭಾವ ಜಾಸ್ತಿಯಿದೆಯೆಂದು ತಿಳಿಯಬೇಕು. ಈ ಮೂರು ಗುಣಗಳ ಪ್ರಭಾವವು ಪ್ರತಿದಿನವೂ, ಪ್ರತಿ ಕ್ಷಣವೂ, ಪ್ರತಿಯೊಬ್ಬ ಜೀವಿಗಳ ಸ್ಥಿತಿಯ ನಿಶ್ಚಯ ಮಾಡುತ್ತಿರುತ್ತದೆ. ಮನುಷ್ಯನು ದಿನಂಪ್ರತಿ ಮಾಡುವ ಕೆಲಸ ಕಾರ್ಯಗಳ ಮೇಲೆ ಈ ಮೂರು ಗುಣಗಳ ಪ್ರಭಾವ ಇದ್ದೇ ಇರುತ್ತದೆ. ಯಾವಾಗ ಜೀವಿಗೆ ನಿದ್ರೆ ಆವರಿಸುವುದೋ, ಆಗ ತಮೋಗುಣದ ಪ್ರಭಾವವಿರುತ್ತದೆ. ಸಂಸಾರದ ಕೆಲಸ - ಕಾರ್ಯಗಳ ವೃತ್ತಿಯು ರಾಜಸಿಕ ಪ್ರಭಾವವನ್ನು ತಿಳಿಸುತ್ತದೆ. ಯಾವಾಗ ಜೀವನು ಪೂಜೆ - ಸತ್ಸಂಗ, ಗೀತಾಜಿ ಪಠಣಾದಿ ಕ್ರಿಯೆಗಳಲ್ಲಿ ತೊಡಗುವನೋ ಆಗ ಅವನಲ್ಲಿ ಸಾತ್ವಿಕ ಅಂಶದ ಪ್ರಕ್ರಿಯೆ ಕಾಣಬಹುದು.

**14.7**

**ರಜೋ ರಾಗಾತ್ಮಕಂ(ಮ್) ವಿದ್ಧಿ, ತೃಷ್ಣಾಸಂಗಸಮುದ್ಭವಮ್**
**ತನ್ನಿಬಧ್ನಾತಿ ಕೌಂತೇಯ, ಕರ್ಮಸಂಗೇನ ದೇಹಿನಮ್ ॥7॥**

ಹೇ ಅರ್ಜುನ! ರಾಗರೂಪೀ ರಜೋಗುಣವು ಆಸೆ-ಆಕಾಂಕ್ಷೆ ಮತ್ತು ಆಸಕ್ತಿಯಿಂದ ಉತ್ಪತ್ತಿಯಾಗುವುದು ಎಂದು ತಿಳಿ. ಅದು ಜೀವಾತ್ಮನನ್ನು ಕರ್ಮಗಳ ಮತ್ತು ಅವುಗಳ ಫಲದ ಆಸಕ್ತಿಯಿಂದ ಬಂಧಿಸುತ್ತದೆ.

ಈ ಶ್ಲೋಕದಲ್ಲಿ ಶ್ರೀಕೃಷ್ಣ ರಜೋಗುಣದ ವಿಷಯವನ್ನು ಮತ್ತು ರಜೋಗುಣದ ಪರಿಣಾಮವಾಗಿ ಉಂಟಾಗುವ ತೃಷ್ಣೆ ಮತ್ತು ಆಸಕ್ತಿಗಳ ಬಗ್ಗೆ ವಿವರಿಸುತ್ತಾನೆ. ಈ ತೃಷ್ಣಾ ಸಂಗಗಳು ಮನುಷ್ಯನನ್ನು ಬಂಧಿಸುತ್ತವೆ ಮತ್ತು ಕರ್ಮಸಂಬಂಧವಾದ ಆಸಕ್ತಿಯಿಂದ ದೇಹದಲ್ಲಿ ಬೀಳುವ ಬಂಧನವನ್ನು ಉಂಟುಮಾಡುತ್ತವೆ ಎಂದು ಹೇಳಿದ್ದಾನೆ.

ಮನುಷ್ಯನ ಆಸೆಗಳು ಮತ್ತು ಕಾಮನೆಗಳು ರಜೋಗುಣದ ಪ್ರಕ್ರಿಯೆಯಲ್ಲಿ ತೊಡಗಿಸುತ್ತವೆ. ಇವು ಜೀವಾತ್ಮನನ್ನು ಕರ್ಮಗಳಲ್ಲಿ ಮತ್ತು ಕರ್ಮಫಲದ ಬಂಧನದಲ್ಲಿ ಕಟ್ಟಿ ಹಾಕುತ್ತವೆ. ರಜೋ ಗುಣವು ಕರ್ಮಗಳಿಗೆ ಪ್ರೇರಕವಾಗಿರುತ್ತದೆ. ಯಾವುದೇ ಕರ್ಮಾಚರಣೆಯಲ್ಲಿ ರಜೋ ಗುಣದ ಅಂಶವು ಇರಲೇಬೇಕು. ಆದರೆ ಸರಿಯಾದ, ಶಾಸ್ತ್ರಾನುರೂಪಿ ಮಾರ್ಗಗಳಿಂದ ಆಚರಿಸಿದ ಕರ್ಮಗಳು, ಸಾತ್ವಿಕ ಅಂಶದಿಂದ ಕೂಡಿರುತ್ತವೆ. ಫಲದ ನಿರೀಕ್ಷೆಯನ್ನು ಇಟ್ಟುಕೊಂಡು ಮಾಡಿರುವ ಕರ್ಮಗಳು ರಜೋ ಪ್ರವೃತ್ತಿಯವು. ರಜೋ ಪ್ರವೃತ್ತಿಯಿಂದ ಆಚರಿಸಿದ ಕರ್ಮಗಳು ನಾನು, ನನ್ನದು, ನನ್ನಿಂದಾಯಿತು ಎಂಬ ಇಚ್ಛಾ ವಾಕ್ಯಗಳಿಂದ ಕೂಡಿರುತ್ತವೆ. ಯಾವುದೇ ಕರ್ಮಗಳಿಲ್ಲದೆ, ಪ್ರಮಾದಯುಕ್ತ ವಿಷಯಾಸಕ್ತಿಗಳಲ್ಲಿ ತೊಡಗಿದರೆ ಅಂತಹ ಕರ್ಮಗಳು ತಾಮಸಿಕ ಎನಿಸುತ್ತವೆ.

**14.8**

**ತಮಸ್ತ್ವಜ್ಞಾನಜಂ(ಮ್) ವಿದ್ಧಿ, ಮೋಹನಂ(ಮ್) ಸರ್ವದೇಹಿನಾಮ್**
**ಪ್ರಮಾದಾಲಸ್ಯನಿದ್ರಾಭಿಃ(ಸ್), ತನ್ನಿಬಧ್ನಾತಿ ಭಾರತ ॥8॥**

ಎಲೈ ಅರ್ಜುನ! ದೇಹಾಭಿಮಾನಿಗಳನ್ನೆಲ್ಲಾ ಮೋಹಗೊಳಿಸುವ ತಮೋಗುಣವು ಅಜ್ಞಾನದಿಂದ ಉತ್ಪತ್ತಿಯಾಗುವುದೆಂದು ತಿಳಿ. ಅದು ಜೀವಾತ್ಮನನ್ನು ಪ್ರಮಾದ, ಆಲಸ್ಯ ಮತ್ತು ನಿದ್ರೆಗಳ ಮೂಲಕ ಬಂಧಿಸುತ್ತದೆ.

ಈ ಶ್ಲೋಕದಲ್ಲಿ ಶ್ರೀಕೃಷ್ಣನು ತಮೋಗುಣದ ವಿಷಯಗಳು ಮತ್ತು ಪರಿಣಾಮಗಳನ್ನು ತಿಳಿಸುತ್ತಾನೆ. ಹೇ ಅರ್ಜುನ, ಎಲ್ಲ ದೇಹಾಭಿಮಾನಗಳನ್ನು ಮೋಹಿತಗೊಳಿಸುವ ತಮೋಗುಣದ ಪ್ರಭಾವವನ್ನು ಅಜ್ಞಾನಯುಕ್ತವೆಂದು ತಿಳಿಯಬೇಕು ಎಂದು ಹೇಳುತ್ತಾನೆ. ಜೀವಾತ್ಮನನ್ನು ಪ್ರಮಾದ, ಆಲಸ್ಯ, ನಿದ್ರೆಗಳು ದೇಹದಲ್ಲಿ ಬಂಧಿಸಿಡುತ್ತವೆ.

ಈ ಸಂಸಾರದಲ್ಲಿ ಎಷ್ಟೇ ದೊಡ್ಡ ಯೋಗಿಗಳು ಇದ್ದರೂ ಅವರಿಗೂ ಕೂಡ ತಮೋ ಅಂಶದ ಪ್ರಭಾವವಿರುತ್ತದೆ. ಸಾಧು - ಸಂತರು ಸಹ ೪-೫ ಗಂಟೆ ಕಾಲ ನಿದ್ರೆ ಮಾಡಲೇಬೇಕು. ಅಷ್ಟು ಪ್ರಮಾಣದ ತಮೋ ಅಂಶ ಅವರಿಗೆ ಬೇಕು. ಹೀಗಾಗಿ ಪ್ರತಿ ಜೀವರಲ್ಲಿ ಈ ತ್ರಿಗುಣಗಳ ಅಂಶವು ಇರುವುದು ಅನಿವಾರ್ಯ. ಸಂಪೂರ್ಣ ಪ್ರಕೃತಿಯು ಈ ತ್ರಿಗುಣಗಳ ಸಮ್ಮಿಶ್ರಣದಿಂದಲೇ ಆಗಿದೆ. ಹೀಗಿರುವಾಗ, ಒಂದೊಂದು ಗುಣಗಳ ಪ್ರಭಾವ ಕೆಲವೊಮ್ಮೆ ಜಾಸ್ತಿ ಕೆಲವೊಮ್ಮೆ ಕಡಿಮೆ ಇರುತ್ತದೆ.

ರಾಜಸಿಕ ಪ್ರಮಾಣವನ್ನು ಕಡಿಮೆ ಮಾಡಿ ಸಾತ್ವಿಕತ್ವದ ಅಂಶ ಹೆಚ್ಚಿಸಲು ಅಥವಾ ಸಾತ್ವಿಕ ಉನ್ಮುಖದ ಕಡೆಗೆ ಕರ್ಮಗಳನ್ನು ಪ್ರೇರೇಪಿಸಲು ನಮ್ಮ ಸುತ್ತು ಮುತ್ತಲಿನ ವಾತಾವರಣ ಮತ್ತು ವಿಷಯಗಳ ಗ್ರಹಣವೇ ಕಾರಣವಾಗಿರುತ್ತದೆ. ಇಂಗ್ಲಿಷ್ ಭಾಷೆಯಲ್ಲಿ ಒಂದು ಗಾದೆ ಮಾತು ಇದೆ : There are two wolves (ತೋಳಗಳು) ; Good Wolf & Bad Wolf. ನಾವು ಯಾವ ತೋಳಕ್ಕೆ ಆಹಾರವನ್ನು ಕೊಟ್ಟು ಪೋಷಿಸುತ್ತೇವೆಯೋ ಅದು ಬೆಳೆಯುತ್ತದೆ. ಹಾಗೆಯೇ ನಮ್ಮಲ್ಲಿ ಮೂರು ಗುಣಗಳಿರುತ್ತವೆ. ನಾವು ಯಾವ ಗುಣವನ್ನು ಅತಿಯಾಗಿ ಪೋಷಿಸುತ್ತೇವೆಯೋ ಅದೇ ಗುಣದ ಪ್ರವೃತ್ತಿಯು ನಮ್ಮಲ್ಲಿ ಬೆಳೆಯುತ್ತದೆ.

ಮದುವೆಯ ಮನೆಯ ಸಾಂದರ್ಭಿಕ ವಾತಾವರಣವು ಎಲ್ಲೆಡೆ ಸಹಜವಾಗಿ ರಜೋ ಗುಣ ಪ್ರಭಾವ ಬೀರುವಂತಹದ್ದಾಗಿರುತ್ತದೆ. ಅದೇ ಸತ್ಸಂಗದಲ್ಲಿ ಗೀತೆಯ ವಿವೇಚನಾ ಸತ್ರದಲ್ಲಿ ತೊಡಗಿಸಿಕೊಂಡಾಗ ಅವನ ವೃತ್ತಿಯು ಸಾತ್ವಿಕ ಭಾವದೆಡೆಗೆ ವಾಲುತ್ತದೆ. ಹೀಗೆ ನಮ್ಮ ಸುತ್ತುಮುತ್ತಲಿನ ವಾತಾವರಣದ ಪ್ರಭಾವವು ಈ ತ್ರಿಗುಣಗಳ ಪುಷ್ಟಿಯನ್ನು ಮಾಡುತ್ತದೆ. ಅದೇ ರೀತಿ ಪರಿಸ್ಥಿತಿಯನ್ನು ನಿರ್ವಹಣೆ ಮಾಡಿಕೊಂಡು ನಾವು ಎಷ್ಟು ಹೊತ್ತು ರಾಜಸಿಕ ವೃತ್ತಿಯಲ್ಲಿರುತ್ತೇವೆ, ಸಾತ್ವಿಕ ವೃತ್ತಿಯು ಎಷ್ಟು ಹೊತ್ತು ನನ್ನ ಬಳಿಯಿತ್ತು, ತಾಮಸ ಗುಣದ ಭಾವವು ಯಾವಾಗ, ಎಲ್ಲಿಯವರೆಗೆ ಇತ್ತು ಎಂದೆಲ್ಲ ವಿವೇಚನೆ ಮಾಡಿಕೊಳ್ಳಬೇಕು. ಈ ಗುಣಗಳ ನಿಗ್ರಹಣ ಮಾಡುವ ಅಧಿಕಾರ ಮತ್ತು ಶಕ್ತಿ ನಮ್ಮಲ್ಲಿಯೇ ಇದೆ ಎಂದು ಶ್ರೀಕೃಷ್ಣನು ಅರ್ಜುನನಿಗೆ ಹೇಳುತ್ತಾನೆ.

ಕಚೇರಿಯ ಕೆಲಸ ಮಾಡುವಾಗ, ಅಡುಗೆ ಮಾಡುವಾಗ, ಮನೆಯನ್ನು ಸ್ವಚ್ಛ ಮಾಡುವಾಗ, ಬೇರೆಯವರಿಗೆ ಸಹಾಯ ಮಾಡುವಾಗ, ಈ ರೀತಿ ಯಾವುದೇ ಕೆಲಸದಲ್ಲಿದ್ದಾಗ ನಾವು ಯಾವ ವೃತ್ತಿಯಿಂದ ಮಾಡುತ್ತಿದ್ದೇವೆ ಎಂಬ ಎಚ್ಚರಿಕೆ ಮತ್ತು ತಿಳಿವಳಿಕೆ ನಮ್ಮಲ್ಲಿರುವುದು ಅವಶ್ಯಕ.

**14.9**

**ಸತ್ತ್ವಂ(ಮ್) ಸುಖೇ ಸಂಜಯತಿ, ರಜಃ(ಖ್) ಕರ್ಮಣಿ ಭಾರತ**
**ಜ್ಞಾನಮಾವೃತ್ಯ ತು ತಮಃ(ಫ್), ಪ್ರಮಾದೇ ಸಂಜಯತ್ಯುತ ॥9॥**

ಹೇ ಅರ್ಜುನ, ಸತ್ತ್ವಗುಣವು ಸುಖದಲ್ಲಿ ಪ್ರೇರಣೆಯನ್ನುಂಟುಮಾಡುತ್ತದೆ. ರಜೋಗುಣವು ಕರ್ಮದಲ್ಲಿಯೂ, ಹಾಗು ತಮೋಗುಣವು ಜ್ಞಾನವನ್ನು ಆವರಿಸಿಕೊಂಡು ಪ್ರಮಾದದಲ್ಲಿ ಪ್ರೇರಣೆಯನ್ನು ಉಂಟುಮಾಡುತ್ತವೆ.

ಹೇ ಅರ್ಜುನನೇ, ಸತ್ವಗುಣವು ಸುಖದ ಪ್ರವರ್ತನೆ ಮಾಡುತ್ತದೆ. ರಜೋಗುಣವು ವಿವಿಧ ಕರ್ಮಗಳಲ್ಲಿ ತೊಡಗಿಸುತ್ತದೆ. ತಮೋಗುಣವು ಅಜ್ಞಾನದಿಂದ ಪ್ರಮಾದ ವೃತ್ತಿಗಳಲ್ಲಿ ತೊಡಗಿಸುತ್ತದೆ.

ಇಲ್ಲಿ ಭಗವಂತನು ಸುಂದರವಾದ ಉಪಾಯಗಳನ್ನು ಕೊಡುತ್ತಾನೆ. ಇದರಲ್ಲಿ ಮಹತ್ವವಾದ ಸೂತ್ರವನ್ನು ತಿಳಿಸುತ್ತಾನೆ.

**14.10**

**ರಜಸ್ತಮಶ್ಚಾಭಿಭೂಯ, ಸತ್ತ್ವ(ಮ್) ಭವತಿ ಭಾರತ**
**ರಜಃ(ಸ್) ಸತ್ತ್ವ(ನ್) ತಮಶ್ಚೈವ, ತಮಃ(ಸ್) ಸತ್ತ್ವ(ಮ್) ರಜಸ್ತಥಾ ॥10॥**

ಎಲೈ ಅರ್ಜುನ! ರಜೋಗುಣವನ್ನು ಮತ್ತು ತಮೋಗುಣವನ್ನು ಬದಿಗೊತ್ತಿ ಸತ್ತ್ವಗುಣವೂ, ಹಾಗೂ ಸತ್ತ್ವಗುಣವನ್ನು ಮತ್ತು ತಮೋಗುಣವನ್ನು ಬದಿಗೊತ್ತಿ ರಜೋಗುಣವೂ, ಅದರಂತೆಯೇ ಸತ್ತ್ವಗುಣವನ್ನು ಮತ್ತು ರಜೋಗುಣವನ್ನು ಬದಿಗೊತ್ತಿ ತಮೋಗುಣವೂ ಉಂಟಾಗುತ್ತದೆ ಅರ್ಥಾತ್ ಪ್ರಬಲವಾಗುತ್ತದೆ.

ಈ ಮೂರು ಗುಣಗಳಲ್ಲಿ ಸತ್ವ ಗುಣವು ರಜೋ ಮತ್ತು ತಮೋ ಗುಣಗಳನ್ನು ದಬ್ಬಿ ತನ್ನ ಪ್ರಭಾವವನ್ನು ಬೀರುತ್ತದೆ. ಹಾಗೆಯೇ ರಜೋಗುಣವು ಸತ್ವ ಮತ್ತು ತಮಸ್ಸನ್ನು ತನ್ನ ಪ್ರಭಾವದಿಂದ ದಬ್ಬುತ್ತದೆ. ತಮೋಗುಣವು ಸತ್ವ ಮತ್ತು ರಜೋ ಗುಣದ ಮೇಲೆ ತನ್ನ ಪ್ರಾಬಲ್ಯ ಸ್ಥಾಪಿಸುತ್ತದೆ.

ಈ ಮೂರೂ ಗುಣಗಳ ದರ್ಶನವನ್ನು ಸುಂದರ ಕಾಂಡದ ಒಂದು ಕಥಾ ಪ್ರಸಂಗದ ಮೂಲಕ ತಿಳಿಯಲು ಪ್ರಯತ್ನಿಸೋಣ. ಮಾತಾ ಸೀತೆಯನ್ನು ಹುಡುಕುವ ಪ್ರಸಂಗ. ಶ್ರೀ ಹನುಮಂತ ದೇವರ ಸಮುದ್ರ ಲಂಘನದ ಸಂದರ್ಭ. ಜಾಂಬುವಂತನ ಪ್ರೇರಣೆಯಿಂದ ಹನುಮಂತ ದೇವರು ತಮ್ಮಲ್ಲಿಯ ಶಕ್ತಿಗಳನ್ನು ಸ್ಮರಣ ಮಾಡಿ, ಎತ್ತರವಾಗಿ ಬೆಳೆದು ನಿಲ್ಲುತ್ತಾರೆ. ಹನುಮಂತ ದೇವರು ಸಮುದ್ರ ಲಂಘನವನ್ನು ಪ್ರಾರಂಭಿಸಿದರು. ಸಮುದ್ರದಲ್ಲಿ ಸಾಗುತ್ತಿರುವಾಗ ಮೈನಾಕ ಪರ್ವತವು ಎತ್ತರಕ್ಕೆ ಬೆಳೆದು ಹನುಮಂತನ ದಾರಿಯಲ್ಲಿ ನಿಂತಿತು. "ನೀನು ಪವನ ಪುತ್ರನಲ್ಲವೇ?" ಎಂದು ಕೇಳಿತು. "ತುಂಬಾ ದೂರದ ಪ್ರಯಾಣ ಇರುವ ಕಾರಣ ವಿಶ್ರಾಂತಿ ಪಡೆದು ಮತ್ತೆ ಪ್ರಯಾಣ ಬೆಳೆಸು" ಎಂದೂ ಹೇಳಿತು. ಇವು ಸತ್ವಗುಣಯುಕ್ತ ಮಾತುಗಳಾಗಿದ್ದರೂ, ಸತ್ವಗುಣವೂ ಸುಖದ ಬಂಧನದಲ್ಲಿ ಸಿಲುಕಿಸುತ್ತದೆ ಎಂಬುದನ್ನು ತಿಳಿದ ಹನುಮಂತ ದೇವರು, ಪರ್ವತ ರಾಜನಿಗೆ ನಮಿಸುತ್ತಾರೆ. "ಶ್ರೀರಾಮನ ಕೆಲಸಕ್ಕೆ ನಾನು ನಿಯೋಜಿನೆಗೊಂಡಿದ್ದೇನೆ. ಈಗ ವಿಶ್ರಾಂತಿ ಪಡೆಯುವುದಿಲ್ಲ" ಎಂದು ತಿಳಿಸಿ ಪರಿಕ್ರಮಣ ಮಾಡಿ ಮುಂದೆ ಸಾಗುತ್ತಾರೆ.

ಮುಂದೆ ಹೋದ ಹಾಗೆ ಭಗವಂತನು ನಿಯೋಜಿಸಿದ ಈ ದೂತನು ತನ್ನ ಕಾರ್ಯದಲ್ಲಿ ಸಾಕ್ಷ್ಮತೆಯನ್ನು ಪಡೆಯುವನೋ ಇಲ್ಲವೋ ಎಂಬುದನ್ನು ಪರೀಕ್ಷೆಯನ್ನು ಮಾಡಲು ದೇವತೆಗಳು ಸುರಸಾ ಎಂಬ ನಾಗಗಳ ಮಾತೆಯನ್ನು ಕಳಿಸುತ್ತಾರೆ. ಸುರಸಾ ರಾಕ್ಷಸಿ ರೂಪದಲ್ಲಿ ಬಂದು ನಿಂತು "ನೀನು ನನಗೆ ಒಳ್ಳೆಯ ಆಹಾರವಾದೆ ಇವತ್ತಿನ ದಿವಸ" ಎಂದು ಗರ್ಜಿಸಿದಳು. ಹನುಮಂತ ದೇವರು ಹೇಳುತ್ತಾರೆ, "ನಾನು ಶ್ರೀ ರಾಮನ ಒಂದುಸಲ ಮುಗಿಸಿ ಬರುತ್ತೇನೆ. ನಂತರ ನಿನ್ನ ಆಹಾರವಾಗುತ್ತೇನೆ" ಎಂದರು. ಆದರೂ ಸುರಸಾ ದಾರಿಯನ್ನು ಬಿಡಲಿಲ್ಲ. ರಜೋಗುಣಿಯಾದ್ದರಿಂದ ಅವಳು ತನ್ನ ಶರೀರವನ್ನು ಬೆಳೆಸುತ್ತ ಹೋದಳು. ಹನುಮಂತ ದೇವರು ಇದನ್ನು ಅರಿತು, ತಾವೂ ಅದೇ ರೀತಿಯಲ್ಲಿ ಶರೀರವನ್ನು ಬೆಳೆಸುತ್ತ ಹೋದರು. ಒಂದು ಹಂತದಲ್ಲಿ ತಕ್ಷಣ ಹನುಮಂತ ದೇವರು ತಮ್ಮ ಶರೀರವನ್ನು ಕುಗ್ಗಿಸಿಕೊಂಡು ಸುರಸಾಳ ಬಾಯಿಯನ್ನು ಹೊಕ್ಕು ಹೊರಗೆ ಬಂದರು. ಹೀಗೆ ಅವಳನ್ನು ತೃಪ್ತಿ ಪಡಿಸಿ ಮುಂದೆ ಸಾಗಿದರು. ರಾಜಸ ಗುಣವನ್ನು ಗೆದ್ದು ಮುಂದೆ ಸಾಗಿದರು.

ಮುಂದೆ ಸಾಗುತ್ತಿದ್ದಾಗ, ನಿಶಾಚರ ರಾಕ್ಷಸಿಯು, ಪಕ್ಷಿಗಳ ಛಾಯೆಯನ್ನು ಹಿಡಿದು, ಅವುಗಳನ್ನು ಕೆಳಗೆ ಬೀಳಿಸಿ, ಅವನ್ನು ತಿನ್ನುತ್ತಿದ್ದಳು. ಹನುಮಂತ ದೇವರ ನೆರಳನ್ನೂ ಕೂಡ ಇವಳು ಹಿಡಿದು ಅವರನ್ನು ನಿಲ್ಲಿಸಿದಳು. ಒಂದು ಕ್ಷಣ ಹನುಮಂತ ದೇವರಿಗೆ ತನ್ನನ್ನು ಹಿಡಿದು ನಿಲ್ಲಿಸಿದವರು ಯಾರೆಂದು ಅಚ್ಚರಿಯಾಯಿತು. ಈ ರಾಕ್ಷಸಿಯನ್ನು ನೋಡಿ, ಅವಳ ಮುಖಕ್ಕೆ ಮುಷ್ಠಿ ಪ್ರಹಾರವನ್ನು ಮಾಡಿದರು. ನಂತರ ಮತ್ತೆ ಸಮುದ್ರದ ಲಂಘನವನ್ನು ಮಾಡಿದರು. **ಸತ್ವಗುಣಕ್ಕೆ ನಮಸ್ಕರಿಸಿ ಮುಂದೆ ನಡೆದರು. ರಜೋ ಗುಣವನ್ನು ರಜೋಗುಣದಿಂದಲೇ ಪರಾಜಯಗೊಳಿಸಿ ಮುಂದೆ ಸಾಗಿದರು ಮತ್ತು ತಮೋಗುಣದ ದಮನ ಮಾಡಿ ತಮ್ಮ ಗುರಿ ಮುಟ್ಟಿದರು.**

ಹನುಮಾನ್ ಜಿ ಲಂಕೆಯ ಪ್ರವೇಶ ಮಾಡಿ ಒಂದು ಸಣ್ಣ ನೊಣದ ರೂಪವನ್ನು ಪಡೆದುಕೊಳ್ಳುತ್ತಾರೆ. ಲಂಕಿಣಿ ಎಂಬ ಹೆಸರಿನ ನಿಶಾಚಾರಿ ಅಲ್ಲಿನ ದ್ವಾರಪಾಲಕಿ. ಅವಳು ಹನುಮಂತ ದೇವರನ್ನು ತಡೆದು ನಿಲ್ಲಿಸುತ್ತಾಳೆ. ಅವಳಿಗೂ ಕೂಡ ಒಂದು ಮುಷ್ಠಿ ಪ್ರಹಾರವನ್ನು ಮಾಡಿದರು. ಈ ಪ್ರಹಾರದಿಂದ ಜಾಗೃತಳಾದ ಲಂಕಿಣಿ ತನ್ನ ಎರಡೂ ಕೈಗಳಿಂದ ನಮಸ್ಕರಿಸಿದಳು. "ರಾವಣ, ಕುಂಭಕರ್ಣ ಮೊದಲಾದ ರಾಕ್ಷಸರಿಗೆ ಬ್ರಹ್ಮ ವರವಿತ್ತಾಗ, ಈ ರಾಕ್ಷಸರ ಅಂತವು ಯಾವಾಗ ಆಗುತ್ತದೆ" ಎಂದು ನಾನು ಬ್ರಹ್ಮನನ್ನು ಕೇಳಿದ್ದೆ. ಆಗ ಬ್ರಹ್ಮ ದೇವರು, "ಯಾವಾಗ ನೀನು ಒಂದು ಕಪಿಯಿಂದ ಪ್ರಹಾರವನ್ನು ತಿಂದು ವಿಚಲಿತಳಾಗುವಿಯೋ ಆಗ ಅವರ ಅಂತ್ಯ ಹತ್ತಿರದಲ್ಲಿಯೇ ಇದೆ

ಎಂದು ತಿಳಿದುಕೊ" ಎಂದು ಹೇಳಿದ್ದರು. ಇದರಿಂದಾಗಿ ಆ ರಾಕ್ಷಸಿಯು ಹನುಮಂತ ದೇವರನ್ನು ಗುರುತಿಸುತಾಳೆ. ಇಲ್ಲಿ ತಮೋ ಗುಣದ ರಾಕ್ಷಸಿಯೂ ಸಹ ಸತ್ವಗುಣಿಯ ಸಂಗದಿಂದ ತನ್ನ ಪ್ರವೃತ್ತಿಯನ್ನು ಬದಲಿಸಿಕೊಳ್ಳುತ್ತಾಳೆ. "ಯಾವ ಜನ್ಮದ ನನ್ನ ಪುಣ್ಯವು ಜಾಗೃತವಾಯಿತೋ, ಭಗವಂತನ ದೂತನ ದರ್ಶನ ಭಾಗ್ಯ ಇವತ್ತು ಆಯಿತು" ಎಂದು ಹೇಳುತಾಳೆ.

ಹೀಗೆ ಲಂಕಿಣಿಯು ಲಂಕಾ ರಾಜ್ಯದಲ್ಲಿ ಹನುಮಂತ ದೇವರನ್ನು ಸ್ವಾಗತಿಸುತಾಳೆ. ಹೀಗೆ ಮೂರು ಗುಣಗಳ ದರ್ಶನ ಮತ್ತು ಹೇಗೆ ಹನುಮಂತ ದೇವರು ಈ ಗುಣಗಳ ಪ್ರಭಾವಕ್ಕೆ ಸಿಲುಕದೇ ಜಯವನ್ನು ಸಾಧಿಸುತಾರ್ರೆ ಎಂಬುದು ಈ ಕಥಾ ದರ್ಶದಿಂದ ತಿಳಿಯುತದ್ದೆ.

ಹರಿ ಭಜನೆಯೊಂದಿಗೆ ಇವತ್ತಿನ ಸತ್ರವನ್ನು ವಿವೇಚಕರು ಸಂಪನ್ನಗೊಳಿಸಿದರು.

**ಪ್ರಶ್ನೋತ್ತರಗಳು**

**ಆರತಿ ಅಕ್ಕ**
**ಪ್ರಶ್ನೆ** - ಬೇರೆಯವರ ನಿಂದೆ ಮಾಡುವುದು ಸರಿಯಲ್ಲ ಅಂತ ತಿಳಿದಿದೆ. ಆದರೆ ಅದನ್ನು ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು?
**ಉತ್ತರ -** ರಾಗ-ದ್ವೇಷಗಳು ಬಂಧನಕ್ಕೆ ಕಾರಣವಾಗುತ್ತವೆ. ನಿಂದೆಯಿಂದ ತಾಮಸಿ ಪ್ರವೃತ್ತಿ ಜಾಗೃತವಾಗುತದ್ದೆ. ನಿಮ್ಮ ಮನದಲ್ಲಿ ಇಂತಹ ಪ್ರಶ್ನೆ ಜಾಗೃತವಾಗಿದೆಯೆಂದರೆ, ಸುಧಾರಣೆಗೆ ಸಮಯ ಪಕ್ವವಾಗಿದೆ ಎಂದರ್ಥ.

**ಜಯಶ್ರೀ ಅಕ್ಕ**
**ಪ್ರಶ್ನೆ** - ದೈನಂದಿನ ಗೀತಾ ಪಠಣವನ್ನು ಯಾವ ಅಧ್ಯಯದೊಂದಿಗೆ ಮಾಡಬೇಕು? ಮತ್ತು ನಮ್ಮಿಂದ ಬೇರೆಯವರಿಗೆ ಗೊತ್ತಾಗ್ತದೆ ನೋವಾಗಿದ್ದಲ್ಲಿ ಅಥವಾ ನಾವು ಅವರಿಗೆ ಸಹಾಯ ಮಾಡದೆ ಹೋಗಿದ್ದಲ್ಲಿ ಏನು ಮಾಡಬೇಕು ?
**ಉತ್ತರ -** ನಿಮ್ಮ ಇಷ್ಟದ ಅಧ್ಯಾಯದೊಂದಿಗೆ ದೈನಂದಿನ ಗೀತಾ ಪಠಣ ಮಾಡಬಹುದು. ಯಾವುದಾದರೂ ವ್ಯಕ್ತಿಗೆ ಅಪಚಾರ ಮಾಡಿದ್ದೇವೆ ಅಂತ ಅನಿಸಿದ್ದರೆ, ಅವರು ಜೀವಂತವಾಗಿದ್ದಲ್ಲಿ ಅವರ ಕ್ಷಮೆ ಕೇಳಿಕೊಂಡು ಅದರಿಂದ ಮುಕ್ತರಾಗಬಹುದು.

**ಸೀಮಾಜಿ ಅಕ್ಕ**
**ಪ್ರಶ್ನೆ** - ಗುರುಗಳು ಹೇಗಿರಬೇಕು? ಯಾರನ್ನು ನಾವು ನಮ್ಮ ಜೀವನದಲ್ಲಿ ಅನುಸರಿಸಬೇಕು?
**ಉತ್ತರ -** ಪ್ರತ್ಯಕ್ಷ ರೂಪದಲ್ಲಿ ಗುರುಗಳ ಮಹತ್ವ ಜಾಸ್ತಿಯಾಗಿರುತದ್ದೆ. ಏಕೆಂದರೆ ಅವರು ನಮ್ಮ ಜ್ಞಾನದ ಪ್ರಮಾಣವನ್ನು ಸರಿಯಾಗಿ ತಿಳಿಸುತಾರ್ರೆ. ಗುರುಗಳು ಸ್ವಯಂಭೂ ಆಗಿರಬಾರದು. ಶಾಸ್ತ್ರ ಪುರಾಣ, ಉಪನಿಷತ್ತುಗಳನ್ನು ಓದಿಕೊಂಡವರೂ ಮತ್ತು ತಿಳಿಸುವವರೂ ಆಗಿರಬೇಕು ಮತ್ತು ಭಗವಂತನ ಪೂಜೆಯಲ್ಲಿ ತೊಡಗಿಸಿಕೊಂಡಿರಬೇಕು. ಅಂತಹವರು ಸದ್ಗುರುಗಳ ಸ್ಥಾನದಲ್ಲಿ ಇರುತಾರ್ರೆ.

**ಹೇಮಾ ಅಕ್ಕ**
**ಪ್ರಶ್ನೆ** - ಓಂಕಾರವನ್ನು ಸ್ತ್ರೀಯರು ಏಕೆ ಮಾಡಬಾರದು?
**ಉತ್ತರ -** ಶಾಸ್ತ್ರ ನಿಯಮ ಪ್ರಕಾರ, ಯಜ್ಞೋಪವೀತ ಧಾರಣೆ ಮಾಡುವವರಿಗೆ ಮಾತ್ರ ಇದನ್ನು ಹೇಳುವ ಆದೇಶ ಇರುತದ್ದೆ. ಸ್ತ್ರೀಯರಿಗೆ ಇದನ್ನು ಹೇಳುವ ಅಧಿಕಾರವಿಲ್ಲ. ಓಂಕಾರವನ್ನು ಬಿಟ್ಟು ಯಾವುದೇ ದೇವತೆಗಳ ಶ್ಲೋಕಗಳನ್ನೂ ಹೇಳಬಹುದು.

**ಹನುಮಾನ್ ಪ್ರಸಾದ್ ಅಣ್ಣ**
**ಪ್ರಶ್ನೆ** - ಆಚಾರ್ಯ ಮತ್ತು ಗುರು ಇವರಲ್ಲಿ ವ್ಯತ್ಯಾಸವೇನು ?
**ಉತ್ತರ -** ಆಚಾರ್ಯರು ಯಾವುದೇ ಒಂದು ವಿಷಯ ಅಥವಾ ವಿಷಯಗಳ ಮಾರ್ಗದರ್ಶಕರು. ಆದರೆ ಸದ್ಗುರುಗಳು ಬ್ರಹ್ಮ ಜ್ಞಾನವನ್ನು ತಿಳಿಸುವವರಾಗಿರುತಾರ್ರೆ.

ಅರ್ಥ ವ್ಯಾಖ್ಯಾನದ ನಮ್ಮ ಈ ರಚನೆ ನಿಮಗೆ ತೃಪ್ತಿ ನೀಡಿದೆ ಎಂದು ಭಾವಿಸುತ್ತೇವೆ. ದಯಮಾಡಿ ಈ ಕೆಳಗಿನ ಕೊಂಡಿ ಬಳಸಿ ನಿಮ್ಮ ಪ್ರತಿಕ್ರಿಯೆ ನೀಡಬೇಕೆಂದು ವಿನಂತಿ.

https://vivechan.learngeeta.com/feedback/

**ಈ ಸಾರಾಂಶವನ್ನು ಓದಿದ್ದಕ್ಕಾಗಿ ನಿಮಗೆ ಧನ್ಯವಾದಗಳು**

ಅರ್ಥ ವಿವೇಚನೆಯ ಈ ಬರಹವನ್ನು ನೀವು ಆನಂದಿಸಿರುವಿರೆಂದು ಭಾವಿಸುತ್ತೇವೆ. ಬರಹದಲ್ಲಿ ದೋಷಗಳು ನುಸುಳದಂತೆ ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸಿದ್ದೇವೆ. ಆದರೂ, ಸಣ್ಣಪುಟ್ಟ ತಪ್ಪುಗಳಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಅವುಗಳನ್ನು ನಿರ್ಲಕ್ಷಿಸಿ ಸಹಕರಿಸಬೇಕೆಂದು ವಿನಂತಿ.

---

**ಜೈ ಶ್ರೀಕೃಷ್ಣ!**

ಸಂಕಲನ : ಗೀತಾ ಪರಿವಾರದ ಸೃಜನಾತ್ಮಕ ಬರವಣಿಗೆಯ ತಂಡ

---

**ಪ್ರತಿ ಮನೆಯಲ್ಲಿ ಗೀತೆ, ಪ್ರತಿ ಕರದಲ್ಲಿ ಗೀತೆ !**

ಗೀತಾ ಪರಿವಾರದ ಧ್ಯೇಯವನ್ನು ಪಸರಿಸಲು ನಾವೆಲ್ಲಾ ಒಂದಾಗೋಣ. ನಮ್ಮ ಬಂಧು-ಮಿತ್ರರಿಗೆ ಗೀತಾ ತರಗತಿಗಳ ಉಡುಗೊರೆಯನ್ನು ನೀಡೋಣ.

https://gift.learngeeta.com/

---

ಗೀತಾ ಪರಿವಾರ ಹೊಸ ಕ್ರಮ ಕೈಗೊಂಡಿದೆ. ಈ ಹಿಂದಿನ ಎಲ್ಲ ಅರ್ಥ ವಿವೇಚನೆಗಳ ಯೂಟ್ಯೂಬ್ ವೀಡಿಯೋಗಳನ್ನು ವೀಕ್ಷಿಸಬಹುದು ಹಾಗು ಪಿಡಿಎಫ್ ಆವೃತ್ತಿಯ ಬರಹಗಳನ್ನು ಓದಬಹುದು. ಇದಕ್ಕಾಗಿ ಕೆಳಗಾಣಿಸಿದ ಲಿಂಕ್ ಬಳಸಿರಿ.

https://vivechan.learngeeta.com/

---

**ಗೀತೆ ಕಲಿಯಿರಿ, ಗೀತೆ ಹರಡಿರಿ, ಗೀತೆ ಜೀವಿಸಿರಿ**

**|| ಓಂ ಶ್ರೀ ಕೃಷ್ಣಾರ್ಪಣಮಸ್ತು ||**